# 1. ಸಿದ್ಧಯ್ಯ ಪುರಾಣಿಕ

**ಪರಿಚಯ-** ಕಾವ್ಯಾನಂದ ಕಾವ್ಯನಾಮದಿಂದ ಚಿರಪರಿಚಿತರಾದ ಡಾ. ಸಿದ್ಧಯ್ಯ ಪುರಾಣಿ ಅವರು ಸ್ವತಂತ್ರ ಧೀರ ಸಿದ್ಧೇಶ್ವರ ಅಂಕಿತದಲ್ಲಿ 'ವಚನೋದ್ಯಾನ' ಮತ್ತು 'ವಚನ ರಾಮ' ಎಂಬ ಮೂರು ವಚನ ಸಂಕಲನಗಳಲ್ಲಿ ಸುಮಾರು 1500 ವಚನಗಳನ್ನು ಬರೆದಿದ್ದಾರೆ. ಡಾ. ಸಿದ್ಧಯ್ಯ ಪುರಾಣಿಕರು ವ್ಯಕ್ತಿ, ಸಮಾಜ, ಕುಟುಂಬ, ಸಹಬಾಳ್ವೆ, ನೈತಿಕತೆ, ವಿಜ್ಞಾನ, ವಿಚಾರ ಮುಂತಾದ ವಿಚಾರಗಳನ್ನು ವಸ್ತುವಾಗಿಸಿಕೊಂಡು ವಚನಗಳನ್ನು ಬರೆದಿದ್ದಾರೆ. ಬಹಳ ಮುಖ್ಯವಾಗಿ ಅವರ ವಚನಗಳಲ್ಲಿ ಬದುಕು, ಸಮನ್ವಯತೆಯ ದೃಷ್ಟಿಕೋನವನ್ನು ಕಾಣುತ್ತೇವೆ.

**ಕವನದ ಸಾರಾಂಶ-** ವೇದಗಳನ್ನು, ಪುರಾಣಗಳನ್ನು ಓದಿ ತಿಳಿದು ಕೊಂಡು, ಆಚಾರ ವಿಚಾರಗಳನ್ನು ಪಾಲಿಸಿ, ಪೂಜಿಸಿ ಬ್ರಾಹ್ಮಣನಂತೆ ಪಂಡಿತನಾಗ ಬೇಕೆಂದು ಬಯಸಿದರೆ ಪಂಡಿತನಾಗು, ಜ್ಞಾನಿಯಾಗು, ಹಾಗೆಯೇ ಅನ್ಯಾಯದ, ಅಧರ್ಮದ ವಿರುದ್ಧ ಹೋರಾಡಿ ಕ್ಷತ್ರೀಯನಾಗು, ಬದುಕಲುಬೇಕಾದ ಯಾವುದೇ ಕಾರ್ಯವಿರಲಿ ನಿಷ್ಠೆಯಿಂದ ಮಾಡಿ ಶೂದ್ರ, ವೈಶ್ಯನಾಗು. ನೀನು ನಿನ್ನ ಜೀವನದಲ್ಲಿ ಏನು ಆಗಲು ಬಯಸುವೆಯೋ ಅದೇ ಆಗು. ಆದರೆ ಎಲ್ಲದಕ್ಕಿಂತ ಮೊದಲು ಮಾನವನಾಗಬೇಕೆಂದು ಕವಿ ಇಲ್ಲಿ ಜನರಿಗೆ ಕರೆ ಕೊಟ್ಟಿದ್ದಾನೆ. ಮನುಷ್ಯನಿಗೆ ಜೀವನದಲ್ಲಿ ಬೇಕಾಗಿರುವುದು ಮಾನವತೆ, ಅದನ್ನು ಬಿಟ್ಟು ಅವನು ಬೇರೆ ಏನಾದರೂ ಆದರೂ ಸಹ ಅದು ಯಾವುದಕ್ಕೆ ಸರಿಸಮಾನವಾಗಲಾರದು, ಅದಕ್ಕಾಗಿ ಮನುಷ್ಯರು ಮೊದಲು ಸಮಾಜದಲ್ಲಿ ಮಾನವನಂತಾಗಿ ಬಾಳ ಬೇಕೆಂಬುದೇ ಕವಿಯ ಆಶೆಯಾಗಿದೆ.

ಜಾತಿ, ಮತ, ಧರ್ಮದಲ್ಲಾದರು ಅಷ್ಟೇ, ಹಿಂದೂ ಸಂಸ್ಕೃತಿಯಲ್ಲಿ ಬೇಕಾದರು ಇರು, ಬೌದ್ಧನಾಗು, ಕ್ರೈಸ್ತನಾಗು, ಚಾರ್ವಾಕನಾಗುಬೇಕಾದರೆ ಆಗು, ನೀನು ಭೋಗ ಬಯಸಿ ಏನಾದರೂ ಆಗು, ಎಲ್ಲರೂ ಒಪ್ಪುವಂತೆ, ಸರಿ ಎನ್ನುವಂತಾಗು. ರಾಜಕಾರಣಿಯಾಗು, ರಾಷ್ಟ್ರಭಕ್ತನಾಗು, ಕಲೆಗಾರನಾಗು, ವಿಜ್ಞಾನಿಯಾಗು, ವ್ಯಾಪಾರಿಯಾಗು, ಏನಾದರೂ ಸರಿ ನೀನು ಇಷ್ಟಪಟ್ಟಿದ್ದೆಲ್ಲವನ್ನು ನೀನು ಮಾಡು ಆದರೆ ಆ ಎಲ್ಲದಕ್ಕಿಂತ ಮೊದಲು ಮಾನವನಾಗವ.

Scanned with CamScan

ಈ ನನ್ನ ಮನಸ್ಸು, ಆತ್ಮ ಕಬ್ಬಿಣದಂತಾಗಲಿ, ಏಕೆಂದರೆ ನಿನ್ನ ಅಡಿಯ ಆಯಸ್ಕಾಂತಕ್ಕೆ ಈ ನನ್ನ ಕೀರ್ಣ ಮನದ ಚೂರುಗಳು ಕಬ್ಬಿಣವೆಂಬ ಲೋಹದ ಚೂರುಗಳು ಅಟ್ಟಿಕೊಳ್ಳುವಂತೆ ಅಂಟಿಕೊಳ್ಳುವೆ, ನಿನ್ನ ಸಂಕೇತದ ಸುತ್ತಲೂ ಸುತ್ತುವ ಕ್ಷಿಪಣಿಯಾಗಲು ನಾನು ಬಯಸುತ್ತೇನೆ. ಈ ನನ್ನ ಶರೀರ ಸ್ವತಂತ್ರ ಧೀರ ಎಂದು ತನ್ನ ಆರಾಧ್ಯದೈವ ಸಿದ್ಧೇಶ್ವರನನ್ನು ನೆನೆಯುವರು ಅಷ್ಟೇ ಅಲ್ಲದೇ ಆರಾಧ್ಯದೈವ ಪ್ರಯೋಗಶಾಲೆಯಲ್ಲಿ ಟೆಸ್ಟ್‌ಟ್ಯೂಬ್‌ನಂತೆ ಆತನ ಜೀವನ ಆಗಲು ಬಯಸುವನು.

ಈ ಜೀವನವೆಂಬ ಕಾಳ ಸಂತೆಯಲ್ಲಿ ಮೋಸಗಾರರು, ವಂಚನೆ ಮಾಡುವವರು, ಅಧರ್ಮ, ಅನ್ಯಾಯದಿಂದ ನಡೆಯುವವರು ಹೆಚ್ಚಾಗಿದ್ದಾರೆ. ಜೀವನದ ಮರ್ಮವನ್ನು ಮರೆತು ಅಧರ್ಮದ ಮಾರ್ಗದಲ್ಲಿ ನಡೆದು, ನ್ಯಾಯದಿಂದ, ಶ್ರಮವಿಲ್ಲದೆ ಅನೀತಿಯಿಂದ ಹೆಸರನ್ನು ಗಳಿಸುವವರ ಸಂಖ್ಯೆಯೇ ಹೆಚ್ಚಾಗಿದೆ. ಲಂಚದ ಹಣದಿಂದ ಪಂಚಾಮೃತವನ್ನು ಮಾಡಿಸುವವರು, ಕಾಳಸಂತೆಯ ಹಣದಿಂದ ಪಲ್ಲಕ್ಕಿಯ ಕೂಡಿಸುವವರು, ಖೊಟ್ಟಿ ಪರವಾನಿಗೆಯ ಹಣದಿಂದ ಗೋಪುರವನ್ನು ಕಟ್ಟಿಸುವವರು, ಕಂಟ್ರೋಲಿನ ಕಾಂಚಾಣದಿಂದ ಕಳಸವಿಡಿಸುವವರು ಯಾರೋ ಕಲಬೆರಕೆಯ ಸಂಪಾದನೆಯಿಂದ ಪ್ರಸಾದ ಹಂಚುವವರು, ಯಾರೋ ಮೋಸದ ಹಣದಿಂದ ಧರ್ಮದ ಶಾಲೆಯನ್ನು ಕಟ್ಟಿಸುವವರು, ಹೀಗೆ ಕದ್ದು ತಿನ್ನುವ ಖದೀಮ, ಕಳ್ಳರ ಭಕ್ತಿಯನ್ನು ನೋಡಿ ನಗುತ್ತಿರುವಿಯೇನಯ್ಯಾ? ಸಿದ್ಧೇಶ್ವರ ಇಂತಹವರು ಮಾಡುವ ಕೆಲಸವನ್ನು ಕಂಡು ಕೇವಲ ನಕ್ಕರೆ ಸಾಲದು, ಅವರನ್ನು ಇಕ್ಕಳದೊಳಗೆ ಇರಿಸು, ವಿದ್ಯೆಯಲ್ಲಿ ಮುಂದುವರೆದು ವಿನಯವನ್ನು ಮರೆತಿರುವರು. ಬುದ್ಧಿಯನ್ನು ಕಲಿತು ಶ್ರದ್ಧೆಯನ್ನು ಬಿಟ್ಟರು, ಶ್ರದ್ಧೆಯನ್ನು ಕಲಿತು, ವಿವೇಚನೆಯನ್ನು ಮರೆತರು.

ಎಲ್ಲಾ ರೀತಿಯ ಸಮೃದ್ಧಿಯು ಬಂತು ಆದರೆ ಸಂಸ್ಕೃತಿ ಹೋಯಿತು, ವಿಜ್ಞಾನ ಬಂತು, ಸಮಾಧಾನ ಹೋಯ್ತು ಶರೀರ ಸ್ವಾಸ್ಥ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು ಬೋಧನೆ ಬಂತು, ಸಾಧನೆಯೆಂಬುದು ಹೋಯಿತು. ಮಾತು ಬಂದಿತು, ಕೃತಿಯು ಇಲ್ಲದಂತಾಯಿತು. ಸ್ವಾತಂತ್ರ್ಯ ಬಂದಿತು, ಸೌಜನ್ಯ ಹೋಯಿತು. ಸಿದ್ಧಯ್ಯ ಪುರಾಣಿಕ ಬಂದೆ, ಸ್ವತಂತ್ರ ಧೀರ ಸಿದ್ಧೇಶ್ವರ ಹೋದ. ಸ್ವತಂತ್ರಧೀರ ಸಿದ್ಧೇಶ್ವರ, ಪ್ರಿಯಕರ ನೀನೂ ಹಲವು ದಾರಿಯಿಂದ ಬಂದೆ, ನಾನೂ ಹಲವು ದಾರಿಯಿಂದ ಬಂದೆ, ಆದರೆ, ಸಂಕೇತದ ಸ್ಥಾನದಲ್ಲಿ ಒಂದು ಸಮಯ ನೀನು ಇರಲಿಲ್ಲ, ಒಂದು ಬಾರಿ ನಾನು ಇರಲಿಲ್ಲ, ನಿನಗೂ ಮಿಲನದ ಬಯಕೆ, ಆದರೆ ನನ್ನ ಬಯಕೆ ನಿನ್ನ ಬಯಕೆ, ಬಂದು ದಾರಿಯೂ ಒಂದಾಗಲಿಲ್ಲ ಮದುವೆಯ ಬದುಕು ಚೆನ್ನಾಗಿಯಾಗಲಿಲ್ಲ.

Scanned with CamScan

ಹೀಗೆಯೇ ಸಮಾನಾಂತರ ರೇಖೆಗಳಂತೆ ಸಾಗಲೇನಯ್ಯ ಸತಿ--ಪತಿ ಸಂಬಂಧ? ಸಾಕಾಯ್ತು ಬರಿ ಬ್ರಹ್ಮಗಂಟಿನ ಬಂಧ, ಬೇರೆನ್ನು ಬಾಹುಬಂಧ.

ಒಬ್ಬ ನೀರೋನಿಂದ ರೋಮ ನಗರದ ರೋಮ ರೋಮ ತಲ್ಲಣಿಸಿತು, ಭಾರತದಲ್ಲಿಂದು ಊರೂರಿಗೂ ನೀರೋಗಳಯ್ಯ ಒಬ್ಬ ಶಿಖಂಡಿಯಿಂದ ಅತ್ಯುನ್ನತಿಯ ಅಮರ ಸಿಂದೂದ್ಭವನ ಕೊನೆಯಾಯಿತು. ಇಂದು ಇಲ್ಲಿ ಪಂಚಾಯಿತಿಗಳಿಂದ ಪಾರ್ಲಿಮೆಟ್ಟಿನವರೆಗೆ ಶಿಖಂಡಿಗಳು ನೋಡಲು ಸಿಗುತ್ತಾರೆ. ಒಬ್ಬ ತುಘಲಕನಿಂದ ಈ ದೇಶವೆಲ್ಲ ಅಸ್ತವ್ಯಸ್ತನಾಗಿದ್ದಿತು. ಈಗ ತುಘಲಕರಿಲ್ಲದ ಸ್ಥಳ ಯಾವುದು ? ಈ ಹಿಂದೆ ಘೋರ ಅರಣ್ಯದಲ್ಲಿ ಮಾತ್ರ ದರೋಡೆಕೋರರು ಇದ್ದರು, ಆದರೆ ಇಂದು ಹಾಡುಹಗಲೆ ಎಲ್ಲೆಂದರಲ್ಲಿ ಓಣಿ, ಓಣಿಗೂ, ಗಲ್ಲಿ ಗಲ್ಲಿಯಲ್ಲಿ ಎಲ್ಲಿ ಬೇಕಾದರೂ ತುಘಲಕಿಗಳನ್ನು ನೋಡಬಹುತು. ನೀನು ವಿಶ್ವತೋಪಾದನೆಂಬುದು ನಿಜವಾದರೆ ಅವರನ್ನು ಒಮ್ಮೆಲೆ ನೀನು ತುಳಿದು ಬಿಡು.

ಎಣ್ಣೆಯಿಲ್ಲದೆ ದೀಪ ಉರಿಯಿತು, ನೀರು ಇಲ್ಲದೆ ನದಿಯು ಹರಿಯಿತು, ಬಳ್ಳಿಯ ತಿಲ್ಲದೆ ಮೊಗ್ಗು ಬಿರಿಯಿತು, ಮೋಡವಿಲ್ಲದೆ ಮಳೆಯು ಸುರಿಯಿತು, ಹಸುವಿಲ್ಲದೆ ಹಾಲು ಕರೆಯಿತು, ಏನೆಂಥ ಬೆರಕು ನೆರೆಯಿತು.

# 2. ಮಹಾದೇವ ಬಣಕಾರ

**ಕವಿ ಪರಿಚಯ-** ಆಧುನಿಕ ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾದೇವ ಬಣಕಾರ ಅವರು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಮೋಟೆ ಬೆನ್ನೂರಿನಲ್ಲಿ 3 ಅಕ್ಟೋಬರ್ 1937 ರಂದು ಗದಿಗೆಪ್ಪ, ಸಿದ್ದಮ್ಮ ದಂಪತಿಗಳ ಮಗನಾಗಿ ಜನಿಸಿದರು. ಹುಟ್ಟು ಪ್ರತಿಭಾವಂತರಾದ ಇವರು ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳ ಕೃಪೆಗೆ ಪಾತ್ರರಾಗಿ ಅವರಿಂದ ತಮ್ಮ ಜೀವನದಲ್ಲೊಂದು ಅಪೂರ್ವ ಅನುಭವವನ್ನು ಕಂಡುಂಡ ಭಕ್ತ ಜೀವಿಯಾಗಿ 'ವರಗುರು ಶಿವಕುಮಾರ ಪ್ರಭುವೇ' ಅಂಕಿತದಲ್ಲಿ ಸುಮಾರು 1108 ವಚನಗಳನ್ನು ಬರೆದಿದ್ದಾರೆ. ಬಣಕಾರರು, ಕವಿ, ನಾಟಕಕಾರರಾಗಿ ಮತ್ತು 'ಆಂಗ್ಲರ ಆಡಳಿತದಲ್ಲಿ ಕನ್ನಡ' ಎಂಬ ಸಂಶೋಧನಾತ್ಮಕ ಬೃಹತ್ ಗ್ರಂಥದ ಲೇಖಕರಾಗಿ ಗಮನಸೆಳೆದುಕೊಂಡಿದ್ದಾರೆ. ಇವರ 'ಬಣ್ಣದ ಕಾರಂಜಿ' ಕವನ ಸಂಕಲನಕ್ಕೆ ರಾಜ್ಯ ಸರ್ಕಾರದ ಬಹುಮಾನ ದೊರೆತಿದೆ. ಇವರು ತಮ್ಮ ವಚನಗಳಲ್ಲಿ ಹನ್ನೆರಡನೆಯ ಶತಮಾನದ ವಚನಕಾರ ಆಶಯ ದೃಷ್ಟಿ, ಧೋರಣೆ ಗಳನ್ನು ಹೊಸ ರೂಪದಲ್ಲಿ ಅಭಿವ್ಯಕ್ತಿಗೊಳಿಸುತ್ತಾರೆ. ಆತ್ಮನಿಷ್ಠತೆ, ಸಮಾಜ ವಿಮರ್ಶೆ, ವ್ಯಕ್ತಿಯ ನೈತಿಕತೆ, ಭಕ್ತಿಭಾವ ಅವರ ವಚನಗಳಲ್ಲಿ ಕಾಣುತ್ತೇವೆ.

**ಕವನದ ಸಾರಾಂಶ-** ಜಾತಿ ಮತವೆಂಬ ಅಹಂಕಾರದಲ್ಲಿದ್ದವರಿಗೆ ವಚನಕಾರನು ತಮ್ಮ ವಚನಗಳಿಂದ ಹೀಯಾಳಿಸಿದ್ದಾರೆ, ಕುಲವೆಂದು ಹೇಳಿ ಗೌರವವನ್ನು ಪಡೆಯುವವರು ನಿಮ್ಮ ಕುಲ ಯಾವುದು ಎಂಬುದನ್ನು ಮೊದಲಿಗೆ ಹೇಳಿರಿ ಕುನ್ನಿಗಳಿರಾ ಎಂದು ಕೇಳುತ್ತಾರೆ. ನಾನು ಅಪ್ಪಟ ಶರಣನೆಂದು ಹೇಳಿಕೊಂಡು ವಂಚಿಸುವ ಸಂಚುಗಾರನು ಶರಣರಿಗೆ ಸರಿಯಾಗಲು ಸಾಧ್ಯವೇ? ಇಲ್ಲ ಅದು ಸಾಧ್ಯವಿಲ್ಲದ ಮಾತು. ಹಲವಾರು ದೈವಗಳನ್ನು ನಂಬಿ ಹಲವಾರು ತೀರ್ಥ ಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ, ಇದರಲ್ಲಿ ಭಕ್ತಿಯ ಮರ್ಮವು ಸ್ವಲ್ಪವೂ ಇಲ್ಲ, ಇದು ಕೇವಲ ತಿರುಕರು ಮನೆ ಮನೆಗೆ ಮತ್ತು ಊರೂರು ತಿರುಗುವ ಹಾಗೆಯೇ ,ಸರಿ, ಇದನ್ನು ನೀವು ಏನು ಹೇಳುತ್ತೀರಿ ತಿಳಿಗೇಡಿಗಳಿರಾ.

ಬೇಟೆಯನ್ನು ಕಲಿಸುವ ಬೆಕ್ಕು, ಇಲಿಯನ್ನು ತಂದವರ ಕಣ್ಣುಗಳನ್ನು ಕಳೆದು ತನ್ನ ಮರಿಯನ್ನು ಆಡಿಸುವಂತೆ ತನ್ನ ಪಂಚೇಂದ್ರಿಯಗಳ ಆರುಹ ಕಳೆದು ಮರವಿನೊಳಗೆ ಆಡಿಸುವತಿಹವಯ್ಯ.

ಹುಟ್ಟಿದ ಮಗುವನ್ನು ಕರೆತಂದು ಈತನೇ ಮುಂದಿನ ಪೀಠಾಧಿಕಾರಿ ಎಂದು ಈತನೇ ನಿಮ್ಮ ಮುಂದಿನ ಗುರು ಎಂದು ಹೇಳು ಒಡೆತನವನ್ನು, ಅಧಿಕಾರವನ್ನು

Scanned with CamScan

ಕೈಗೆತ್ತಿಕೊಳ್ಳುವ ಭಕ್ತರಿಗೆ ಕವಿ ಏನೆಂದು ಕರೆಯಬೇಕು ಎಂದು ಕೇಳುತ್ತಾನೆ. ಮಠವನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡು ಮನಸ್ಸಿನಲ್ಲಿ ಮಮಕಾರವನ್ನು ತುಂಬಿಕೊಂಡಂತೆ ನಟಿಸಿ, ಗುರುವು ಎಂಬ ಹೆಸರು ಮೇಲೆ ಮೋಸ ಮಾಡುವ ಕಳ್ಳರನ್ನು ಏನೆಂದು ಕರೆಯಬೇಕು? ಶಿವನ ಕುರಿತು ಶಿಶು ಏನು ತಿಳಿದುಕೊಂಡಿರುತ್ತದೆ. ಪರಿಮಳವನ್ನು ಪಶುವೇನು ಬಲ್ಲದು. ಹಸಿಯಾದ, ಇನ್ನೂ ಮಾಗದ ಹಣ್ಣನ್ನು ಹಿಸುಕಿ ಹಣ್ಣು ಮಾಡಿದೊಡೆ ಅದು ರುಚಿಯನ್ನು ನೀಡುವುದೇ ? ಹೇಳಿರಿ ಎಂದು ಕೇಳುವರು.

ಮುಂದಿನ ಜನ್ಮದಲ್ಲಿ ನಾನು ನಿಮ್ಮನ್ನು ಮರೆತರೆ ನೀವು ತಲೆದಂಡವನ್ನು ತೆಗೆದುಕೊಳ್ಳಿ ನನ್ನ ವರಗುರು ಶಿವಕುಮಾರ ಪ್ರಭು, ನಿಮ್ಮನ್ನು ಬಿಟ್ಟು ಬೇರೆ ದೇವಕ್ಕೆ ಎರಗಿದರೆ ತಲೆದಂಡವ ಕೊಳ್ಳದೆ ಬಿಡುವುದಿಲ್ಲ ಎನ್ನುವರ ಶಿವಕುಮಾರ ಪ್ರಭುವೇ.

ಆಸೆ, ದುರಾಸೆಯೆಂಬ ಸುಳಿಯಲ್ಲಿ ಸಿಲುಕಿ, ಹೆಸಗೆಯ ಕೆಲಸ ಮಾಡಿ ಈಗ ಇಲ್ಲಿಂದ ಹೊರಬರಲು ಆಗುತ್ತಿಲ್ಲ, ಈ ಬಂಧನವೆಂಬ ಕೆಸರೊಳಗೆ ಸಿಲುಕಿ ಕೊಂಡಿದ್ದೇನೆ. ಈ ಸಂಕಷ್ಟದಿಂದ ಹಿಂದೆ ಸರಿಯಲೂ ಆಗುತ್ತಿಲ್ಲಾ, ಮುಂದೆ ಹೋಗಲು ಸಾಧ್ಯವಾಗುತ್ತಿಲ್ಲಾ, ನಾನು ಬಂದು ನಿಂತ ಈ ಜಗದ ಪರಿ ಎಂತಹದಯ್ಯ, ರೀತಿ ಎಂತಹದಯ್ಯ, ಆಸೆಗಳ ಬೆನ್ನು ಹತ್ತಿದ ಈ ಮನಸ್ಸು, ದ್ವೇಷ, ಅಸೂಯೆ ಎಂಬ ಹಾಲಹಲದಲ್ಲಿ (ವಿಷದಲ್ಲಿ) ನನ್ನನ್ನು ಇಟ್ಟು ಘಾಸಿ ಗೊಳಿಸುವದನ್ನು ನನ್ನಿಂದ ಸಹಿಸಲಾಗುತ್ತಿಲ್ಲ. ಅಷ್ಟಮದ, ಅರಿಷಡ್ವರ್ಗ ಗಳಾದ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ ಎಂಬುದರ ಮಧ್ಯದಲ್ಲಿ ಸಿಲುಕಿ ಇವುಗಳ ಬಂಧನದಲ್ಲಿ ಬಂಧಿಯಾಗಿ ಒಡ್ಡಾಡುತ್ತಿರುವೆ. ಬಾಯಿಯನ್ನು ತೆರೆದು ಹೇಳುತ್ತಿರಲು ಈ ಆತ್ಮವೆಂಬ ಪಶು ಆಸೆಯನ್ನು ತಿಳಿಯುವುದೇ ಹೊರತು, ಪಶುಪತಿಯ ಬಗ್ಗೆ ತಿಳಿಯಬಹುದೇ? ಹೇಳು ಎನ್ನುವರು ಗುರು ಶಿವಕುಮಾರ ಪ್ರಭುಗಳು.

ವಸಂತ ಋತು ಬಾರದೆ ಕೋಗಿಲೆಯು ಕೂಗುವುದಿಲ್ಲ, ನೀರು ಬಿಟ್ಟು, ಮೀನು ನೆಲದ ಮೇಲೆ ಬದುಕುವುದಿಲ್ಲ, ಭೃಂಗಗಳು ಹೂವುಗಳಿಲ್ಲದೆ ಪಾಷಾಣಕ್ಕೆ ಎರಗದು, (ಹೂವಿನ ಮಕರಂದ ಸವಿಯನ್ನು ಬಿಟ್ಟು ವಿಷವನ್ನು ಹಿರದು). ಚಂದಿರನ ಬೆಳದಿಂಗಳು ಇಲ್ಲದೆ ನೈದಿಲೆಯು ಅರಳುವುದಿಲ್ಲ, ಹಾಗೆಯೇ ನೀವಿಲ್ಲದೆ, ನಿಮ್ಮ ಶ್ರೀ ಚರಣಗಳ ದಾಸನಾಗದೆ ನಾನು ಬೇರೆ ದೈವಕ್ಕೆ ನನ್ನ ತಲೆಬಾರಿ ಶರಣು ಎನ್ನುವುದಿಲ್ಲ.

Scanned with CamScan

ತನ್ನ ಮಗುವನ್ನು ಮರೆತು ಮಂಗವು ಮರದಿಂದ ಮರಕ್ಕೆ ಹಾರಿದರೂ, ತಾಯಿಯನ್ನು ತಬ್ಬಿಕೊಂಡ ಮರಿ ತನ್ನನ್ನು ತಾನು ರಕ್ಷಿಸಿಕೊಳ್ಳುದಯ್ಯಾ ! ಆದರೆ ಈ ದೇಹವೆಂಬ ಗಿಡದಲ್ಲಿ ಕರಣಂಗಳ ರಕ್ಷಿಸಿಕೊಳ್ಳುವುದಯ್ಯಾ! ಆದರೆ ಈ ದೇಹವೆಂಬ ಗಿಡದಲ್ಲಿ ಕರಣಂಗಳ ರೆಂಬೆ, ಕೊಂಬೆಗಳನ್ನು ಏರಿ, ಈ ಮನಸ್ಸೆಂಬ ಮಂಗವೂ ಮನ ಬಂದಂತೆ ಜಿಗಿದರೆ ಈ ಭಕ್ತ ನಿನ್ನನ್ನು ನಂಬಿದವನು. ಮಂಗ ಮರಿಯ ಮಾಡಿ ದೃಢವಾಗಿ ನನ್ನನ್ನು ಹಿಡಿದಿಟ್ಟು ಬದುಕಿಸು ಗುರುವೆ ಪ್ರಭುವೇ.

ಮನಸ್ಸು ಎರಡಾದ ಮದುವಣ ಗಿತ್ತಿಯಂತೆ ಈ ಮನಸ್ಸು ಎರಡಾಗಿದೆ. ಆ ಕಡೆ ಒಮ್ಮೆ ಈ ಕಡೆ ಒಮ್ಮೆ ನೆನೆಯುತ್ತಿದೆ. ವರನ ಹತ್ತಿರ ದೇಹ, ವಿಟನ ಜೊತೆ ಮನಸ್ಸು ಇಟ್ಟರೆ, ಮದುವೆ ದಿಬ್ಬಣಕ್ಕೆ ಎಂದ ಜನ ಏನೇನ್ನುವರಯ್ಯ. ಅಂಗವನೊಮ್ಮೆ ಬೆರೆತು, ಲಿಂಗನ್ನೊಮ್ಮೆ ನೆನೆಸಿ, ಇಂತಹ ಕಾರಣ ನಿನ್ನಿಂದ ದೂರ ನಿನ್ನ ಶ್ರೀ ಚರಣಗಳಿಂದ ದೂರ. ನಿನ್ನನ್ನೇ ಕಾಡಿ, ನಿನ್ನನ್ನೇ ಬೇಡಿ, ನಿನ್ನ ಒಳಗೆ ಆಡುವ ಪರಿಯನ್ನು ತೋರು, ಎನ್ನ ವರಗುರು ಶಿವಕುಮಾರ.

Scanned with CamScanner

# 4. ಅನ್ನದಾನೀಶ್ವರ ಸ್ವಾಮಿಗಳು

**ಕವಿ ಪರಿಚಯ-** ಪ್ರತಿಷ್ಠಿತ ವೀರಶೈವ ಮಠಗಳಲ್ಲಿ ಗದಗ ಜಿಲ್ಲ ಮುಂಡರಗಿ ಡಾ. ನಾಡೋಜ ಜಗದ್ಗುರು ಅನ್ನದಾನೀಶ್ವರ ಸ್ವಾಮಿಗಳು 1969ರ ಶ್ರೀ ಮಠದ ಮಠಾಧೀಶರಾಗಿ ತಮ್ಮ ಬದುಕಿನಲ್ಲಿ ಬಸವಾದಿ ಶರಣ ವಿಚಾರಗಳನ್ನು ಮೈಗೂಡಿಸಿಕೊಂಡಿರುವರು. ಇವರು ಕಾಶಿ ಬನಾರ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಗೈದು ತ್ರಿಭಾಷಾ ಪಂಡಿತರು. ಶ್ರೀಗಳು ಸ್ವತಃ ಸಾಹಿತಿಗಳಾಗಿದ್ದು 'ಮುಂಡರಗಿಯ ಅನ್ನದಾನೀಶ' ಅಂಕಿತದೊಂದಿಗೆ 1976ರ ನೂರೊಂಬತ್ತು ವಚನಗಳನ್ನು 'ವಚನ ವಲ್ಲರಿ' ಎಂಬ ಹೆಸರಿನೊಂದಿ ಪ್ರಾರಂಭವಾಗಿ, 'ವಚನ ಸಂಪದ', 'ವಚನ ಸೌರಭ' ಹಾಗೂ 'ವಚ ಪರಿಮಳ'ವೆಂಬ ಒಟ್ಟು ನಾಲ್ಕು ಪ್ರಮುಖ ವಚನ ಸಾಹಿತ್ಯದ ಕೃತಿಗಳನ್ನು ಹೊ ತಂದಿದ್ದಾರೆ. ಸುಮೂರು ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, ಈ ಕೃತಿಗಳ ಶಿವಾನುಭವ ತತ್ವವೇ ಇವುಗಳ ಆಶಯವಾಗಿರುವುದು ಗಮನಾರ್ಹವಾಗಿದೆ.

**ಕವನದ ಸಾರಾಂಶ-** ಎಲ್ಲರೂ ಮಾಡುವುದು ಈ ಹೊಟ್ಟೆಗಾ ಜೀವನದಲ್ಲಿ ನಡೆಯುವ ಎಲ್ಲ ಸಂಗತಿಗಳು, ಬದುಕು ನಡೆಸುವದಕ್ಕೋಸ್ಕ ಅದರಲ್ಲೂ ಮುಖ್ಯವಾಗಿ ಎಲ್ಲದಕ್ಕೂ ಪ್ರಮುಖವಾಗಿ ಹೊಟ್ಟೆ, ಹಸಿವ ಹೊಟ್ಟೆಯಿರುವುದು ಗೇಣುದ್ದ ಎಂದು ವಚನಕಾರರು ಹೇಳುವರು. ಎಲ್ಲರ ಇದನ್ನು ತುಂಬಿಸಿಕೊಳ್ಳಲು ಪರದಾಡುವರು. ದಿನನಿತ್ಯ ಇದನ್ನು ತುಂಬಿಸಿಕೊಳ್ಳ ಕಾರ್ಯ ಮಾಡಿದರೂ ಅದು ಸಂಪೂರ್ಣವಾಗಿ ತುಂಬಿದ ಉದಾಹರಣೆಗಳಿ ಇದು ಒಂದು ಬಾರಿಯೂ ತುಂಬಿಸಿಕೊಂಡು ತುಳುಕಿಸಿದವರಿಲ್ಲ. ಇದನ ತುಂಬಿಸಿಕೊಳ್ಳಲು ಬಳಲು ಬೆಂಡಾಗುತ್ತಿದೆ ಮನುಷ್ಯ ಜೀವನ. ಇದಕ್ಕೋಸ್ಕ ಬಳಲುವುದನ್ನು ಬಿಟ್ಟು ಮೃಡಗಿರಿ ಅನ್ನದಾನಿಯ ಕೃಪಾ ಪ್ರಸಾದವನ್ನು ಕೊಂಡ ಬದುಕನ್ನು ನಡೆಸಿ ಎಂದು ವಚನಕಾರರು ಹೇಳುತ್ತಾರೆ.

ಈ ಭೂಮಿಯ ಮೇಲೆ ಮಾನವರನ್ನು ಶಿವನು ನಿರ್ಮಿಸಿದನ ಜಾತಿ-ಮತ, ಧರ್ಮಗಳನ್ನು ಮಾನವನರು ತಮ್ಮ ಅನುಕೂಲಕ್ಕಾ ಮಾಡಿಕೊಂಡರು. ಜಾತಿ-ಮತಗಳು ಹಲವು ಪ್ರಕಾರಗಳಿದ್ದರೇನು? ಎಲ ಜಾತಿ-ಧರ್ಮವು ಸಾರುವ ನೀತಿಯು ಒಂದೆಯಾಗಿರುತ್ತದೆ. ಅಂತಹ ಒಳ್ಳೆ ನೀತಿ-ನಿಯಮಗಳ ಅಡಿಪಾಯದ ಮೇಲೆ ನಿಲ್ಲುವವನೆ ಮಹಾತ್ಮನೆಂ ಹೇಳಿದರು ನಮ್ಮ ಮೃಡಗಿರಿ ಅನ್ನದಾನೀಶ.

Scanned with CamScanner

ಬೆಕ್ಕು ಇಲಿಯನ್ನು ಕಂಡು ಸಂತೋಷದಿಂದ ಜಿಗಿಯುವುದು, ನಾಯಿಯು ಮೊಲವನ್ನು ನೋಡಿ ಆಸೆಯಿಂದ ಓಡುವುದು, ಹಾಗೆ ತೋಳವು ಕುರಿಯನ್ನು ಕಂಡ ತಕ್ಷಣ ಅದರ ಮೇಲೆ ದಾಳಿ ಮಾಡುವುದು, ಹುಲಿಯು ಹುಲ್ಲೆಯನ್ನು ಕಂಡು ಹಾರುವುದು, ಪಶು ಹುಲ್ಲಿಗೆ ಎಳಸುವುದು, ಮೃಡಗಿರಿ ಅನ್ನದಾನೀಶ ಇದು ನಿನ್ನ ಜಗತ್ತಿನ ವಿಧಾನ, ವಿಷಯದ ಆಸೆಗೆ ನನ್ನನ್ನು ಮಾಣಿಸಿ ಸಲಹಯ್ಯ.

ಮಂತ್ರಿಗಳು ಹಾಗೂ ಇತರ ಗಣ್ಯ ವ್ಯಕ್ತಿಗಳು ಬಂದರೆ, ವ್ಯಾಪಾರದಲ್ಲಿ ಮೋಸ ಮಾಡುವ ಗ್ರಾಹಕರನ್ನು ವಂಚಿಸುವ ವ್ಯಾಪಾರಿಗಳು ಕೈಯಲ್ಲಿ ಹಾರವನ್ನು ಹಿಡಿದುಕೊಂಡು ಹೋಗುವರಯ್ಯ. ಚಿತ್ರರಂಗದದಿಂದ ನಟ–ನಟಿಯರು ಬಂದರೆ ನವ ಯುವಕರು ಪುಷ್ಪ, ತುರಾಯಿಗಳನ್ನು ಹಿಡಿದು ನುಗ್ಗುವರಯ್ಯ, ಪವಾಡವನ್ನು ಮಾಡುವ ಸನ್ಯಾಸಿ ಬಂದರೆ ಧನಿಕರು ದಕ್ಷಿಣೆಯನ್ನು ಹಿಡಿದುಕೊಂಡು ಧಾವಿಸುತ್ತಾ ಬರುವರು. ಮೃಡಗಿರಿ ಅನ್ನದಾನೀಶ ಹಸಿದು ಹಂಬಲಿಸಿ ಬೆಂಡಾದ ಬಡವರು ಬಂದರೆ ನೋಡಿಯೂ ನೋಡದಂತೆ ಓಡುವರಯ್ಯಾ.

ಅಷ್ಟಾವರಣಾಂಗದ ಪೊಂದ ಶ್ರದ್ಧೆಯಿಂದ ದಾಸೋಹ ಮಾಡುವವನೆ ನಿಜವಾದ ಭಕ್ತನೆನಿಸಿಕೊಳ್ಳುವನು, ಪಂಚಾಚಾರಗಳ ಪ್ರಾಣಿಯಾಗಿ ನಿಷ್ಠೆಯಿಂದ ಸಕಲ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ನಡೆಯುವವನೇ ಮಹೇಶ. ಲಿಂಗದ ಮುಖಾಂತರ ಬಂದಂತಹ ಭಾವ ಅದು ಅವಧಾನ. ಭಕ್ತಿಯಿಂದ ಗ್ರಹಿಸಿ ಪ್ರಸನ್ನ ಚಿತ್ತವನ್ನು ಉಳ್ಳವವನೆ ನಿಜವಾದ ಪ್ರಸಾದಿ. ವಿಷಯಗಳ ಆಸೆಯನ್ನು ತೊರೆದು, ವಾಯುಗಳನ್ನು ನಿಲ್ಲಿಸಿ ಅನುಭಾವದಿಂದ ಲಿಂಗವನ್ನು ಆರಾಧಿಸುವವನೆ ಪ್ರಾಣಲಿಂಗಿ ಶಿವದೃಷ್ಟಿ ಬಲಿದು ಲಿಂಗಪತಿಗೆ ಆನಂದದಿಂದ ಸರ್ವಾರ್ಪರಣ ಮಾಡಬಲ್ಲಾತನೆ ಶರಣ. ಉರಿಯುಂಡ ಕರ್ಪೂರದಂತೆ ಸಮರಸ ಉಳ್ಳವವೇ ಐಕ್ಯ. ಇದು ಷಟ್–ಸ್ಥಲದ ಸಾರ ನೋಡಾ ಮೃಡಗಿರಿ ಅನ್ನದಾನೀಶ.

ವೀರಶೈವ ಧರ್ಮವು ತತ್ವನಿಷ್ಠೆಯನ್ನು ಸಾರುತ್ತದೆಯೇ ಹೊರತು ವ್ಯಕ್ತಿನಿಷ್ಠವನಲ್ಲ, ವ್ಯಕ್ತಿಗೆ ಅಳಿವು, ಸಾವು ಎಂಬ ಕ್ರಿಯೆಗಳುಂಟು. ಆದರೆ ತತ್ವಗಳು ಶಾಶ್ವತವಾದಂತಹವು. ಅವು ವ್ಯಕ್ತಿಯನ್ನು ಒಳ್ಳೆಯ ಮಾರ್ಗಕ್ಕೆ ಕೊಂಡೊಯ್ಯುತ್ತವೆ. ಅವುಗಳಿಗೆ ಬೆಲೆ ಕೊಟ್ಟರೆ ದಳದಳವಾಗಿ ಬೆಳೆಯುವನು. ವ್ಯಕ್ತಿಗಳಲ್ಲಿ ಇವು ಬೆಳೆಯುತ್ತಿದ್ದರೆ ವ್ಯಕ್ತಿಯು ತತ್ವಪುರುಷ ನಾಗುತ್ತಾನೆ.

ಸೂರ್ಯನು ಬಡವ ಬಲ್ಲಿದನೆಂಬ ಭೇದ ಮಾಡದೆ ಬೆಳಕನ್ನು ನೀಡುವನು. ಮಾವಿನ ಮರವು ಕಾಗೆ, ಕೋಗಿಲೆಯೆಂಬ ಭೇದ ಮಾಡುವುದಿಲ್ಲ. ಸರೋವರಕ್ಕೆ ಸೂಳೆ, ಗರತಿಯೆಂಬ ಭೇದವಿಲ್ಲ ಹಾಗೆಯೇ ಬೆಳಗುವ ಜ್ಯೋತಿಗೆ

Scanned with CamScan

# 6. ಜಯಶ್ರೀ ದಂಡೆ

**ಕವಿ ಪರಿಚಯ-** ಡಾ. ಜಯಶ್ರೀ ದಂಡೆಯವರು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿ ಎಂಬ ಗ್ರಾಮದಲ್ಲಿ ಮಾರ್ಚ್ 3 1958ರಲ್ಲಿ ಜನಿಸಿದರು. ಇವರು 1981ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಗುಲಬರ್ಗಾದಿಂದ ಕನ್ನಡ ಸ್ನಾತಕೋತ್ತ್ರ ಪದವಿಯನ್ನು ಪಡೆದು ಮುಂದೆ 1987ರಲ್ಲಿ 'ಬೆಡಗಿನ ವಚನಗಳು' ಎಂಬ ಸಂಶೋಧನೆಯ ಮೂಲಕ ಡಾಕ್ಟರೇಟ್ ಪದವಿಯನ್ನು ಪಡೆದರು. ಪ್ರಸುತ್ತ ಬಸವಾದಿ ಸಾಹಿತ್ಯ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ಜಯಶ್ರೀ ದಂಡೆಯವರು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ವಚನ ಸಾಹಿತ್ಯದಲ್ಲಿ ಅನನ್ಯ ಕೃಷಿ ಮಾಡಿದ್ದಾರೆ, ಶರಣರ ವಚನ ಸಾಹಿತ್ಯ ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. 'ನಿಜಗುಣ ಮಹಾಂತಲಿಂಗ' ಅಂಕಿತದಲ್ಲಿ 'ಸ್ವಭಾವದ ವಚನ'ಗಳನ್ನು ಪ್ರಕಟಿಸಿದ್ದಾರೆ. ಅವರ ವಚನಗಳಲ್ಲಿ ಮುಖ್ಯವಾಗಿ ಪ್ರಾಣಿ, ಹೆಣ್ಣು ಮಾನವನ ಕೌಟುಂಬಿಕ, ಸಾಮಾಜಿಕ ಸಂಬಂಧಗಳು ಕುರಿತು ಬೆಡಗಿನ ರೂಪಕ ದೃಷ್ಟಿ ಕಾಣಲಾಗುತ್ತದೆ.

**ಕವನದ ಸಾರಾಂಶ-** ಪ್ರಾಣಿಗಳಲ್ಲಿಯೇ ಅತಿ ಬುದ್ಧಿವಂತ ಪ್ರಾಣಿ ಮನುಷ್ಯ. ಆದರೆ ಕೆಲವೊಂದು ವಿಷಯಗಳಲ್ಲಿ ತೊಡಗಿ ಅವನು ಪ್ರಾಣಿಗಳಿಗಿಂತ ತುಂಬ ಕೀಳಾಗಿ ವರ್ತಿಸುತ್ತಿದ್ದಾನೆ. ದೇಹದ ಅಣು-ಅಣುವಿನಲ್ಲೂ ಸುಳ್ಳನ್ನು ತುಂಬಿಕೊಂಡಂತಹ ದೇಹವನ್ನು ಹೊತ್ತುಕೊಂಡಿದ್ದಾನೆ. ಮನಸ್ಸಿನ ತುಂಬೆಲ್ಲಾ ಹೇಸಿಗೆ ಬರುವಂತಹ, ನಾಚಿಕೆ ತರುವಂತಹ ಗುಣವನ್ನು ತುಂಬಿಕೊಂಡು, ವಿಚಾರಿಸುವ ವಿಚಾರಗಳಲ್ಲಿಯೂ ಸಹ ಒಳ್ಳೆಯದನ್ನು ಕಾಣಲಾಗುವುದಿಲ್ಲ. ಅವು ಸಹ-ಅಸೂಯೆ, ಅಹಂಕಾರಗಳಿಂದ ತುಂಬಿಕೊಂಡಿರುತ್ತವೆ. ತಮ್ಮ ಬಗೆಗಿನ ಕುರಿತು ವಿಚಾರಿಸುವುದಕ್ಕಿಂತ, ಬೇರೆಯವರ ಕುರಿತು ತಲೆಕೆಡಿಸಿಕೊಳ್ಳುವುದೇ ಹೆಚ್ಚು. ನಾನು ಧರ್ಮ ಪರಿಪಾಲಕ, ಲಿಂಗವಂತನೆಂದು ಹೇಳಿಕೊಳ್ಳುವ ಇವನು ಸಮಾಜದ ಕರುಣೆ, ಕನಿಕರಕ್ಕೆ ಪಾತ್ರನಾಗಿ ಮೆರೆದ ಕಾರಣಕ್ಕೆ ಅವನನ್ನು ಲಿಂಗವಂತನೆಂದು ಕರೆಯಲು ಆಗುವುದಿಲ್ಲ. ತನ್ನ ಸ್ವಾರ್ಥದ ಬದುಕಿಗೋಸ್ಕರ ಕಾಸಿಗೆ ಮಾರುವ ದುಷ್ಕರ್ಮಿಗಳಿಗೆಲ್ಲ ಒಳ್ಳೆಯ ಸ್ಥಾನ ಹೇಳು ನಿಜಗುರು ಮಹಾಂತಲಿಂಗ.

Scanned with CamScan

ಜೀವನವೆಂದರೇನು? ಇದರ ಮರ್ಮವನ್ನು ಅರಿತುಕೊಳ್ಳುವುದು ತುಂಬ ಕಷ್ಟ, ಈ ಬದುಕಿನ ನಿಜವಾದ ಅರ್ಥವನ್ನು ನಾವು ನಿಜಜೀವನದಲ್ಲಿ ತಿಳಿದುಕೊಳ್ಳದೆ ಹೋಗುವರು, ಅದರ ಮಹತ್ವವನ್ನು ತಿಳಿಯದೆ ಕನಸಿನಲ್ಲಿ ಕಲ್ಪನಾ ಲೋಕದಲ್ಲಿ ಇಳಿದು ಹೋಗಿ ಬಡಬಡಿಸುವ, ಸಂತಸಪಡುವ, ಹತ್ತು ಹಲವು ಹವಣಿಕೆಯನ್ನು ಸೃಷ್ಟಿಸುವ ಈ ಜನರ ವರ್ತನೆಯನ್ನು ನೋಡಿ ನನಗೆ ಬೇಸರವಾಗಿದೆ. ಅದರಿಂದ ಈ ಜೀವ ಬಳಲಿ ಹೋಗಿದೆ, ರೋಸಿ ಹೋಗಿ ಎಂದು ಹೇಳುವರು.

ತಾಯಿಯಾದವಳು, ಕುಟುಂಬದ ಎಲ್ಲ ಸದಸ್ಯರ ಹಿತವನ್ನು ಬಯಸುವಳು, ಎಲ್ಲರ ಆಯುಷ್ಯ, ಆರೋಗ್ಯ, ಹಾಗೂ ಇನ್ನಿತರ ವಿಷಯಗಳಿಗಾಗಿ ಹರಕೆಯನ್ನು ಹೊರುವಳು. ತನ್ನ ಸಂಸಾರ ಸುಖವಾಗಿರಲಿ ಎಂಬ ಬಯಕೆಯನ್ನು ಹೊತ್ತು ಕೊಂಡಿರುತ್ತಾಳೆ. ಆ ಸಂತೋಷಕ್ಕಾಗಿ ಆ ಸಂಸಾರಕ್ಕಾಗಿ ಬಂದೊದಗುವ ಸಂಕಷ್ಟ ಗಳನ್ನು ಸಹಿಸುವಳು. ಬರುವ ಕಂಟಕಗಳು ದೂರಾಗಲೆಂದು ಬಯಸುವಳು. ಹಾಗಾದರೆ ಕಟ್ಟಿಕೊಂಡ ಹರಕೆಯನ್ನು ಸಲ್ಲಿಸುವಳು. ನಂತರ ನೆಮ್ಮದಿಯ, ತೃಪ್ತಿಯ ಉಸಿರನ್ನು ಬಿಟ್ಟು ತೃಪ್ತಳಾಗುವಳು. ಜೀವನದಲ್ಲಿ ಇಡುವ ಪ್ರತಿಯೊಂದು ಹೆಜ್ಜೆಯು ವಿಚಾರ ಮಾಡಿ ಇಡಬೇಕು, ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರಗಳನ್ನು ಬುದ್ಧಿವಂತಿಕೆಯಿಂದ ತೆಗೆದುಕೊಳ್ಳಬೇಕು. ಒಳ್ಳೆಯ ಫಲಕ್ಕಾಗಿ, ಒಳ್ಳೆಯ ಗುರಿಗಾಗಿ ಇಟ್ಟ ಹೆಜ್ಜೆ ಹಿಂತೆಗೆದುಕೊಳ್ಳಬಾರದು, ನಡೆಯುವ ಬದುಕಿನ ದಾರಿ ಹೇಗಿದ್ದರೂ ಬುದ್ಧಿವಂತತೆಯಿಂದ, ಜಾಣ್ಮೆಯಿಂದ, ತಾಳ್ಮೆಯಿಂದ, ಸುಗಮ ಮಾಡಿಕೊಳ್ಳಬೇಕು.

ಹೀಗೆ ಬದುಕಿನದ್ದಕ್ಕೂ ನಮಗೆ ಹೆಜ್ಜೆ ಹಾಕುವುದು ತಪ್ಪುವುದಿಲ್ಲ, ಹಾಗಾಗಿ ನಾವಿಡುವ ಹೆಜ್ಜೆ ಅರ್ಥಪೂರ್ಣವಾಗಿರಬೇಕು. ನಿಂತ ಸ್ಥಳವನ್ನು ಬಿಟ್ಟು ಮುಂದೆ ಸಾಗುವಾಗ ನಮ್ಮ ಸುತ್ತ-ಮುತ್ತಲಿನ ಅರಿವು ಬೇಕೆಬೇಕು. ಎಲ್ಲವನ್ನೂ ತಾಳ್ಮೆಯಿಂದ ಮನಗಂಡು ನಡೆಯಬೇಕೆ ವಿನಹ ಅಹಂಕಾರ, ದರ್ಪದಿಂದಲ್ಲ. ದರ್ಪ, ಅಹಂಕಾರದಲ್ಲಿ ನಡೆದರೆ ಮುಂದೆ ಅನಾಹುತವೆಂಬುದು ಕಟ್ಟಿಟ್ಟ ಬುತ್ತಿ, ಅದಕ್ಕಾಗಿ ಎಚ್ಚರಿಕೆಯ ಘಂಟೆಯನ್ನು ಕಟ್ಟಿಕೊಂಡು ನಡೆಯಲು ಕಾಯಬೇಕು. ಇದಕ್ಕೆ ಮುಖ್ಯ ಅಂಶ ಏಕ ಚಿತ್ತ ಇದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ಬದುಕಿನ ಅಡಿಪಾಯ ಜಾಣ್ಮೆ ಚಾಣಾಕ್ಷರತನದಿಂದ ಬಾಳನ್ನು ಬಂಗಾರ ವಾಗಿಸಿ ಕೊಳ್ಳಬಹುದು. ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ವಿಚಾರಶಕ್ತಿ ಯಲ್ಲಿ ಬದುಕಿನ ಶೈಲಿಯಲ್ಲಿ ಭಿನ್ನತೆಯನ್ನು ಹೊಂದಿರುತ್ತಾನೆ. ಇದಕ್ಕೆ ವಚನಕಾರನು ಇಲ್ಲಿ ಜಾಲಿಗಿಡ ವೊಂದಕ್ಕೆ ತನ್ನ ಹಸಿವನ್ನು ನೀಗಿಸಿಕೊಳ್ಳಲು, ಕುರಿಗಳ ಹಿಂಡು

Scanned with CamScan

ಆದಕ್ಕೆ ಬಂದು ಮುತ್ತಿದವು, ಅವು ತನ್ನ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವ ಭರದಲ್ಲಿ ಆ ಗಿಡಕ್ಕೆ ಮುಳ್ಳುಗಳಿವೆ ಎಂಬುದನ್ನು ಮರೆತ್ತಿದ್ದವು. ಹಾಗೆಯೇ ಮನುಷ್ಯನು ಕೂಡ ತನ್ನ ಆಸೆಯನ್ನು ಪೂರೈಸಿ ಕೊಳ್ಳುವ ಭರದಲ್ಲಿ ಯಾವುದು ಸರಿ, ಯಾವುದು ತಪ್ಪು, ಎಂದು ಗುರುತಿಸಿಕೊಳ್ಳಲು ಪ್ರಯತ್ನಿಸದೆ ಮುಂದೆ ಸಾಗುತ್ತಿದ್ದಾರೆ. ಅಲ್ಲಿ ಚಾಣಾಕ್ಷತನದ ಉಪಯೋಗ ಮಾಡಿ ಕೊಳ್ಳುವುದಿಲ್ಲ. ಆದರೆ ಕೆಲವೊಬ್ಬರು ಚಾಕಚಕ್ಯತೆಯಿಂದ ಚಾಣಾಕ್ಷ್ಯದಿಂದ, ಜಾಣ್ಮೆಯಿಂದ ನಡೆಯುತ್ತಿದ್ದಾರೆ. ಅದನ್ನು ತೆಗೆದುಕೊಳ್ಳದ ಕೆಲವು ಮೂರ್ಖರು ಅಂತಹವರ ಬೆನ್ನು ಹತ್ತಿ ನೋವನ್ನು ತಂದುಕೊಂಡು ತೊಂದರೆಗೆ ಗುರಿಯಾಗು ತ್ತಾರೆ. ಕುರಿಯಂತಹ ನಿಶಿತಮತಿ ಬೇರೆ ಪ್ರಾಣಿಗಳಿಗೆ ಬಾರದಿರುವುದೇ ಒಂದು ಸೋಜಿಗ.

ಜಾಲಿ ಗಿಡವನ್ನು ನೋಡಿದ ತಕ್ಷಣ ಕುರಿ ಹಿಂಡುಗಳು ಬಂದು ಅವುಗಳಿಗೆ ಮುತ್ತಿಕೊಂಡು ಅದರಲ್ಲಿರುವ ಎಲೆಗಳನ್ನು ತಿನ್ನುತ್ತಿವೆ, ಆದರೆ ಅದರಲ್ಲಿ ಸಾಕಷ್ಟು ಮುಳ್ಳುಗಳಿವೆ ಎಂಬ ಅರಿವು ಅವುಗಳಿಗೆ ಇರುವುದಿಲ್ಲ, ಹಸಿದ ಹೊಟ್ಟೆಗಾಗಿ ಅವುಗಳನ್ನು ನೋಡದೆಯೇ ಅವುಗಳು ಮೆಯುತ್ತ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿವೆ, ಆದರೆ ಕುರಿ ಹಿಂಡುಗಳಿಗೆ ಈ ಜಾಲಿ ಮರದಲ್ಲಿರುವ ಮುಳ್ಳುಗಳಿಂದ ತಪ್ಪಿಸಿಕೊಳ್ಳುವ ಜಾಣ್ಮೆ ಇದೆ ಅದಕ್ಕಾಗಿ ಅವುಗಳು ಅದರಿಂದ ತಪ್ಪಿಸಿಕೊಂಡು ನಿರಾಳವಾಗಿ ಜಾಲಿ ಗಿಡದ ಎಲೆಗಳನ್ನು ತಿನ್ನುತ್ತಿವೆ, ಅವುಗಳನ್ನು ಮೇಯುವುದನ್ನು ಕಂಡು ಇತರ ಪ್ರಾಣಿಗಳು ಸಹ ಅಲ್ಲಿಗೆ ಬಂದು ಅವು ಸಹ ಕುರಿಗಳು ಮೇಯುವ ಹಾಗೆ ಮೇಯಲು ಹೋಗಿ ಬಾಯಿ ತುಂಬ ಮುಳ್ಳುಗಳನ್ನು ಸಿಕ್ಕಿಸಿಕೊಂಡು ರಕ್ತಚಿತ್ತವಾಗಿ ಅಲ್ಲಿಂದ ಓಡಿ ಹೋಗುತ್ತಿವೆ. ಕುರಿಗಳಿಗೆ ಇರುವ ನಿಶಿತಮತಿ ಬೇರೆ ಪಶುಗಳಿಗೆ ಬಾರದಿವುದು ಒಂದು ಸೋಜಿಗವೇ ಸರಿ ಎಂದು ಹೇಳುತ್ತಾನೆ ವಚನಕಾರ.

ನಿಸರ್ಗದಲ್ಲಿ ತಾಯಿಯ ಸ್ಥಾನ ಬೇರೆ ಯಾರಿಂದಲೂ ತುಂಬಲು ಸಾಧ್ಯವಿಲ್ಲ ಅವಳು ತ್ಯಾಗಮಯಿ, ತ್ಯಾಗಮೂರ್ತಿ, ಅವಳ ತ್ಯಾಗಕ್ಕೆ ಸರಿಸಾಟಿ ಬೇರೆ ಯಾವುದು ಇಲ್ಲ. ಅವಳು ತನಗೋಸ್ಕರಕ್ಕಿಂತ ತನ್ನ ಕರುಳಿನ ಕುಡಿಗಳಿಗೋಸ್ಕರ, ಸಂಸಾರಕ್ಕೋಸ್ಕರ, ಕುಟುಂಬಕ್ಕೋಸ್ಕರ ಬದುಕುವುದೇ ಅವರ ಜೀವನ. ಈ ಮಾತೃ ಹೃದಯವೆಂಬುದು ಪ್ರತಿಯೊಂದು ಜೀವ ಜಂತುಗಳಲ್ಲೂ ಒಂದೇ ರೀತಿಯಾಗಿರುತ್ತದೆ. ಪಕ್ಷಿಗಳಲ್ಲಿ ಮಾತೃ ಹೃದಯೆ ನೋಡಬೇಕಾದರೆ ಅದು ತನ್ನ ಮರಿಗಳಿಗೆ ಬೇಕಾಗುವ ಅವಶ್ಯಕತೆಗಳನ್ನು ನೀಡಿ ಅದು ಹಾರಿಕೊಂಡು ಹೋಗುವಂತಾದಾಗ ಅದು ತನ್ನ ಮರಿಯನ್ನು ಸ್ವತಂತ್ರವಾಗಿ ಹಾರಲು ಬಿಡುವುದು. ಪರರ ಆಶ್ರಯಕ್ಕೆ ಆದರೂ ತಾಯೆದೆ ತುಂಬಿರುವುದೇ ಹೊರತು ಬರಿದಾಗದು.

Scanned with CamScan

ಮಕ್ಕಳಿಗಾಗಿ ತನ್ನನ್ನೇ ಸಮರ್ಪಿಸಿಕೊಳ್ಳುವ ತಾಯಿ ಮಮತೆ ಹಿರಿದಾದುದು ನೋಡು ಎಂದು ಹೇಳುತ್ತಾನೆ ವಚನಕಾರ.

ವಯಸ್ಸಾದವರನ್ನು ಸಾಕಲಾಗದವರು ಅವರು ಜೀವ ಕಂಟಕವೆಂದು ತಿಳಿಯುವರು ಅವರು ಮಾಡಿಟ್ಟಿರುವುದನ್ನೇ ತಿಂದು, ಅವರಿಗೆ ತಿರುಗಿ ಬೀಳುವರು. ಎರಡು ಇದ್ದರೆ ಕಷ್ಟ, ಹೋಗಿ ಒಂದು ಹೋಗಿ ಬಂದು ಉಳಿಯ ಬೇಕು ಎಂದು ಮಾಗಿದವರೆದುರೇ ಅಂದು ಇದ್ದೂ ಸತ್ತರಿತಿರುವವರಂತೆ ಮಾಡಿದರು. ಜಗದ ಸ್ವಾಸ್ಥ್ಯ ಕದಡಿಹುದೆಂದು, ಕೆರಗಿ, ಕೊರಗಿ, ಮುರುಗಿ ತಿರುಗದೆ, ಮೊದಲು ನಿನ್ನ ಮುದ ಮನೆಯವರ ಸ್ವಾಸ್ಥ್ಯದ ಕುರಿತು, ಚಿಂತಿಸಿ ಅಂದರೆ ನಮ್ಮ ಮನೆಯನ್ನು, ಮನೆಯ ಸದಸ್ಯರನ್ನು ಕುರಿತು ಮೊದಲು ವಿಚಾರಿಸಬೇಕು. ಇದೇ ಧರ್ಮ ನಿಜಗುರು ಮಹಾಂತಲಿಂಗ ಎಂದು ವಚನಕಾರ ತಿಳಿಸುತ್ತಾನೆ.

Scanned with CamScan

# 7. ನಾಡೋಜ ಕಮಲಾ ಹಂಪನಾ

**ಕವಿ ಪರಿಚಯ-** ಡಾ. ಕಮಲಾ ಹಂಪನಾ ಅವರು ಅಕ್ಟೋಬರ್ 28, 1935ರಂದು ತುಮಕೂರು ಜಿಲ್ಲೆಯ ಕ್ಯಾತ್ಸಂದ್ರದಲ್ಲಿ ಜನಿಸಿದರು. ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ 28 ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ 'ಬಿಂದಲಿ' ಮತ್ತು 'ಬುಗುಡಿ' ವಚನ ಸಂಕಲನಗಳು ಕನ್ನಡ ಆಧುನಿಕ ವಚನ ಕ್ಷೇತ್ರಕ್ಕೆ ಉತ್ತಮ ಕೊಡುಗೆಯಾಗಿವೆ. ಸಾಮಾಜಿಕ ಸಮಸ್ಯೆ, ಸ್ತ್ರೀ ಶೋಷಣೆ, ಮೌಢ್ಯ ಕಂದಾಚಾರಗಳನ್ನು ವಚನಗಳಲ್ಲಿ ಕಟುವಾಗಿ ವಿಮರ್ಶೆಗೊಳಪಡಿಸಿದ್ದಾರೆ. ಅನೇಕ ಸಂಖ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವ ಡಾ. ಕಮಲಾ ಹಂಪನಾ ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಂಪ ಪ್ರಶಸ್ತಿ ದಾನಚಿಂತಾಮಣಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭ್ಯವಾಗಿವೆ.

**ಕವನದ ಸಾರಾಂಶ-** ವಚನಗಾರ್ತಿಯು ಇಲ್ಲಿ ಬಂದು ಹೋಗುವ ಸಮಸ್ಯೆಗಳನ್ನು ತೊಂದರೆಗಳನ್ನು ಕುರಿತು ಹೇಳಿದ್ದಾರೆ. ಜೀವನದಲ್ಲಿ ಸಮಸ್ಯೆಗಳು ಸರ್ವೆ ಸಾಮಾನ್ಯ, ಅದರಲ್ಲೂ ಹೆಣ್ಣುಮಕ್ಕಳ ಜೀವನವು ಸಮಸ್ಯೆಗಳ ಸುಳಿಯಲ್ಲಿಯೇ ಸಿಲುಕಿರುತ್ತದೆ. ಆದರೆ ಅದಕ್ಕೊಂದು ಕೊನೆಯೆಂಬದಿರುತ್ತದೆ. ಪರಿಹಾರವೆಂಬು ದಿರುತ್ತದೆ. ಇರುಳು ಕಳೆದು ಬೆಳಕು ಹೇಗೆ ಬರುವುದೋ ಹಾಗೆ ಜೀವನದ ಕ್ಷಣಗಳು ಸಹ, ಆವಿಯಾಗಿ ಮೇಲೆರಿ ಹೋದ ನೀರಿನ ಅಂಶವು ಮೋಡವಾಗಿ ಮಳೆಯಾಗಿ ಮತ್ತೆ ಹೊರಟಲ್ಲೇ ಬಂದು ನಿಲ್ಲುಬೇಕು. ವಿಶ್ವಪರ್ಯಟನದ ಬದುಕು ಪರಿಭ್ರಮಿಸುವ ಗಾಲಿ ದುಃಖವನ್ನು ಸಹಿಸಿಕೊ ಸುಖವು ಬಂದ ಬರುವುದು. ನನಗೊಬ್ಬ ಭೀಮನಂತಹ ಶಕ್ತಿಶಾಲಿಯಾದ ಗಂಡನಿದ್ದಾನೆ, ಅವನು ರೇಗಿಸಲು ಉದ್ದೀಪಿಸಲು ಕೆರಳುತ್ತಾನೆ. ಕೆಣಕಿ, ಕೆಂಡವಾಗುತ್ತಾನೆ, ಹೆದೆ ಏರಿಸಿ ಸೌದೆ ಬಡಿಯುತ್ತಾನೆ. ಅನ್ಯಾಯಿಗಳ, ವಂಚಕರ ಮೂಗು ತೀಡಿಸುತ್ತಾನೆ. ಇಟ್ಟಿಗೆಗೆ ಕೆರಳಿದ್ದಾನೆ, ಕೆಂಡವಾಗಿದ್ದಾನೆ, ಈಗ ಅಂದವಾಗಿದ್ದಾನೆ. ಅವನು ನಮ್ಮ ಎಲ್ಲ ಸುಖ ಭಾಗ್ಯಗಳನ್ನು ಮೆಲ್ಲನೆ ಕಸಿಯುವನು. ಬಡತನದಿಂದ ಬಂದು ಕೂಲಿ ಮಾಡಿ ಸಿರಿವಂತನಾಗುವನು. ಮನೆ ಮಠ ಇತ್ಯಾದಿಗಳನ್ನು ಹೊಂದುವನು, ಬೇರೆ ದೇಶದಿಂದ ಬಂದವನು ಈಗ ಇಲ್ಲಿಯುವನೇ ಆಗಿ ಬಿಟ್ಟಿದ್ದಾನೆ.

ನಮ್ಮಣ್ಣ ಬಸವಣ್ಣನು ನುಡಿದಂತೆ ನಡೆ ಎಂಬು ಮಾತಿನ ಮಹತ್ವವನ್ನು ತಿಳಿಸಿದ್ದಾನೆ. ಹಾಗೆ ನಡೆದಂತೆ ನುಡಿ ಎಂದು ಶರಣರು ಹೇಳುವರು. ನಡೆದಂತೆ ನುಡಿವರು, ನುಡಿದಂತ ನಡೆವರು. ಇವೆರೆರಡರಲ್ಲಿಯೂ ಒಂದಾಗದವರನ್ನು

ಅಂಥವರ ಬದುಕಿಗೆ ಬೆಂಕಿ ಹಚ್ಚಬೇಕು. ಹೇಳುವುದೊಂದು ಮಾಡುವುದೊಂದು, ತನ್ನ ಜೀವನ ತುಂಬೆಲ್ಲಾ ಕೇವಲ ನಾಟಕದಂತೆ ನಡೆಯುವರು. ಹಾಗೆ ಕನ್ನಡವೆಂಬುದು ಪ್ರಚಾರಕ್ಕೆ ಬೇಕು ಜೀವನಕ್ಕೆ ಬೇಡ ಎಂದರೆ ಹೇಗೆ? ಇಂತಹ ನುಡಿದಂತೆ ನಡೆಯದವನ ದ್ರೋಹ, ವಂಚಕನನ್ನು ಹೇಗೆ ಶಿಕ್ಷಿಸುವೆ ಕಮಲಾಪ್ರಿಯ.

ನಿನ್ನ ಭಂಡತನದ ಧೈರ್ಯಕ್ಕೆ ನಾನೇನು ಹೇಳಲಿ, ಅದನ್ನು ನಾನೆಷ್ಟು ಕೊಂಡಾಡಲಿ, ನಿನ್ನ ಇಬ್ಬಂದಿತನದ ನುಡಿಯನ್ನು ನಾನೆಷ್ಟು ಹೇಳಲಿ. ಕಾನ್ವೆಂಟಿನಲ್ಲಿ ಕಲಿಯಬೇಕು, ನಿನ್ನ ಮುದ್ದುಗುವವರು. ದೇಶದ ಪ್ರಥಮ ಪ್ರಜೆಯಾಗ ಬೇಕು, ಕನ್ನಡ ಜನತೆಯು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಬೇಕು. ದ್ವಿತೀಯ ಪ್ರಜೆಯಾಗಬೇಕು ಇದು ನಿನ್ನ ಬಯಕೆ ಮರುಳೆ. ಆದರೆ ಇಂದು ನೀ ತಿಳಿದುಕೋ ಕನ್ನಡವೆ ಕಲಿತ ಮಕ್ಕಳು ಇಂದು ಬುದ್ಧಿಯಲ್ಲಿ ವಿಜೃಂಭಿಸಿದರು. ದೇಶಕ್ಕೆ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ. ಅವರನ್ನು ಅವರ ಸಾಹಸವನ್ನು ದೇಶ ವಿದೇಶವು ಕೊಂಡಾಡುವಂತೆ ಮಾಡಿದ್ದಾರೆ.

ನಮ್ಮ ನಾಡು ಕನ್ನಡ, ನಮ್ಮ ನೆಲ, ಜಲ, ಕನ್ನಡ ನಾವಿದಕ್ಕೆ ಋಣಿಯಾಗಿರಬೇಕು. ಇದಕ್ಕೆ ಗೌರವವನ್ನು ನೀಡಬೇಕು. ದೇಶದಲ್ಲಿ ಪ್ರತಿಯೊಂದಕ್ಕೂ ಒಂದೊಂದು ಶಿಕ್ಷೆ ಉಂಟು. ಆದರೆ ಕನ್ನಡದ ದ್ರೋಹಿಗೆ ಯಾವ ಶಿಕ್ಷೆ ಹೇಳು. ಕಳ್ಳತನ ಮಾಡಿದರೆ ಕೈಯನ್ನು ಕಡಿದು ಹಾಕಿ ಶಿಕ್ಷಿಸುವ, ಸುಳ್ಳನ್ನು ಹೇಳಿದವರಿಗೆ ನಾಲಿಗೆಯನ್ನು ಸೀಳುವ ಶಿಕ್ಷೆ, ಕಾಮುಕ ಕಣ್ಣಿನಿಂದ ನೋಡಿದರೆ ಅವನ ಕಣ್ಣನ್ನೇ ಕೀಳುವ ಶಿಕ್ಷೆ, ಕದ್ದು ಓಡಿ ಹೋದವರಿಗೆ ಅವನ ಕಾಲನ್ನು ಕಡಿಯುವ ಶಿಕ್ಷೆ, ವ್ಯಭಿಚಾರಿಗೆ ಕೆಂಡದ ಕಂಬಕ್ಕೆ ಬೆತ್ತಲೆಯಾಗಿ ಅಪ್ಪುವ ಶಿಕ್ಷೆ.

ಹೀಗೆ ಎಲ್ಲಾ ದ್ರೋಹಕ್ಕೂ ದ್ರೋಹಿಗಳಿಗೂ ಶಿಕ್ಷೆಯಿದೆ ಎಂಬುದು ವಚನಕಾರನ ಕನ್ನಡ ನಾಡು ನುಡಿಯ ಅಭಿಮಾನವನ್ನು ಎತ್ತಿ ತೋರಿಸುತ್ತದೆ. ಮಾನವ ಜನ್ಮ ತಳೆದ ಬಳಿಕ ದಿನನಿತ್ಯ ಒಳ್ಳೆಯ ಕರ್ಮ ಮಾಡುತ್ತಾ ಸಾಗಬೇಕು. ನಡೆಸುವವನು ಅವನು ಕೇವಲ ನಡೆಯುವುದಷ್ಟೆ ನಮ್ಮ ಕೆಲಸ. ಮುಂದೆ ನಾಗುತ್ತದೆಂದು ಯಾರು ತಿಳಿಯರು. ನಮ್ಮ ಇಂದಿನಗಳನ್ನು ಉತ್ತಮ ರೀತಿಯಲ್ಲಿ ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗಬೇಕು. ಅದಕ್ಕೆ ವಚನಗಾರ್ತಿ ಹೇಳುತ್ತಾಳೆ, ಪಾದ್ರಿಯೊಬ್ಬನು ಬೇರೆ ಊರಿಗೆ ಹೋಗಿದ್ದನು.

ಆ ಊರಿಗೆ ಆತ ಹೊಸಬು, ಅವನಿಗೆ ಅಂಚೆ ಡಬ್ಬದ ಅವಶ್ಯಕತೆ ಇದ್ದಾಗ, ಅದೇ ಊರಲ್ಲಿ ಇದ್ದ ಒಬ್ಬ ಹುಡುಗನನ್ನು ಅಂಚೆ ಡಬ್ಬದ ಕುರಿತು ವಿಚಾರಿಸುವನು. ಅದಕ್ಕೆ ಆ ಹುಡುಗ ದಾರಿ ತೋರಿಸುವನು. ನಂತರ ಪಾದ್ರಿಯು ಸಂಜೆ ನನ್ನ

Scanned with CamScan

ಉಪನ್ಯಾಸವಿದೆ ಬಾ ಮಗು ಎಂದನು. ಅದಕ್ಕೆ ಆ ಹುಡುಗ ಯಾವ ವಿಷಯದ ಕುರಿತು ಹೇಳುವಿರಿ ಎಂದು ಕೇಳಿದನು. ಅದಕ್ಕೆ ಪಾದ್ರಿ ಸ್ವರ್ಗಕ್ಕೆ ಹೋಗುವ ದಾರಿಯ ಕುರಿತು ಹೇಳುವೆನು ಎಂದನು. ಆದಕ್ಕೆ ಆ ಹುಡುಗ ಸುಮ್ಮನಿರಲಾರದೆ ಅಂಚೆ ಡಬ್ಬಕ್ಕೆ ಹೋಗುವ ದಾರಿ ನಿಮಗೆ ತಿಳಿದಿಲ್ಲಾ, ಇನ್ನೂ ಸ್ವರ್ಗಕ್ಕೆ ಹೋಗುವ ದಾರಿ ಹೇಗೆ ತೋರಿಸುವಿರಿ ಎಂದು ಪ್ರಶ್ನಿಸಿದ. ಆ ಪ್ರಶ್ನೆ ಕೇಳಿದ ಪಾದ್ರಿಗೆ ಏನು ಹೇಳಬೇಕೆಂದು ತೋಚಲಿಲ್ಲ.

ಅದಕ್ಕೆ ನಾವು ಮಾಡುವ ಕಾರ್ಯದಲ್ಲಿ ನಮಗೆ ಜ್ಞಾನ, ತೃಪ್ತಿ ಅಡಗಿರಬೇಕು. ಮಕ್ಕಳಿರಲವ್ವ ಮನೆ ತುಂಬ ಎಂದು ಕೊಂಡವರು ಎಲ್ಲಿ ನೋಡಿದರಲ್ಲಿ ಸಂದುಗೊಂದು ಗಳಲ್ಲಿ ಮಕ್ಕಳೇ ತುಂಬಿ ಮನೆಯೆಂಬುದು ಮಸಣವಾಗಿತ್ತು, ಒಂದು ಮುತ್ತು ಮತ್ತೊಂದು ಮಾಣಿಕ್ಯ ಎರಡೇ ಸಾಕು ಎಂದವರು ಮನೆಯನ್ನು ಸ್ವರ್ಗವಾಗಿಸಿದ್ದರು. ಬದುಕನ್ನು ಹಸಿರಾಗಿಸಿಕೊಂಡರು. ಹೀಗೆ ಪ್ರತಿಯೊಂದರಲ್ಲೂ ಹಿತಮಿತಯೆಂಬುದಿದ್ದರೆ ಶಾಂತಿ, ನೆಮ್ಮದಿ, ಯಶಸ್ಸು ಖಂಡಿತ ಎಂದು ವಚನಗಾರ್ತಿಯು ತಿಳಿಸುವಳು.

Scanned with CamScanner

# ೮. ಬಸವರಾಜ ಸಬರದ

ಕವಿ ಪರಿಚಯ- ಇವರು ಮೂಲತಃ ಕೊಪ್ಪಳ ಜಿಲ್ಲೆಗೆ ಸೇರಿದ ಕುಕನೂರು ಎಂಬ ಗ್ರಾಮದಲ್ಲಿ 20ನೇ ಜೂನ್, 1955ರಲ್ಲಿ ಜನಿಸಿದರು. ಇವರು ನಾಡಿನಾದ್ಯಂತ ಸಾಹಿತ್ಯಕವಾಗಿ ಹೊಸ ಮಾದರಿಯ ಕೆಲಸಗಳನ್ನು ಮಾಡುತ್ತಾ ಬಂಡಾಯ ಸಾಹಿತಿಗಳೆಂದು ಗುರುತಿಸಿಕೊಂಡವರು. ಹತ್ತು, ಹಲವಾರು ಪ್ರಶಸ್ತಿಗಳು ಮುಡಿಗೇರಿಸಿ ಕೊಂಡು ತಮ್ಮದೆ ಆದಂತಹ ಛಾಪು ಮೂಡಿಸಿದ ಸಬರದರು ಸಬರದ ಬಸವ ವಚನಗಳು ಎಂಬ ಶೀರ್ಷಿಕೆಯಿಂದ ಆಧುನಿಕ ವಚನ ಪುಸ್ತಕ ಪ್ರಕಟಿಸಿದ್ದಾರೆ. ಇವರು ಅಂಕಿತನಾಮ 'ಸಬರದ ಬಸವ'.

ಬೀದರ, ಭಾಲ್ಕಿ, ಬೀದರಗಳಲ್ಲಿ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ, ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾಗಿ, ಪ್ರಸಾರಾಂಗ ಹಾಗೂ ಬಸವಾದಿ ಶರಣ ಸಾಹಿತ್ಯ ಕೇಂದ್ರ ನಿರ್ದೇಶಕರಾಗಿ ವಿವಿಧ ಸ್ತರದ ಹುದ್ದೆಗಳಲ್ಲಿ ಕರ್ತವ್ಯಗಳನ್ನು ನಿರ್ವಹಿಸಿ, ಪ್ರಸ್ತುತ ನಿವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ.

ವಚನದ ಸಾರಾಂಶ- ಇಲ್ಲಿ ವಚನಕಾರ ತನ್ನ ಭಕ್ತಿಯ ಕುರಿತು ದೃಢ ನಿಲುವನು, ಮುಗುದೆಯಾಗದ ಮದುವೆಯಾದೆನು, ಮದುವೆಯಾಗದ ಎಷ್ಟೋ ಯಾರೆ, ಮದುವೆ ಮಾಡಿಸಲು ಬಂದವರು ಮರಳಿ ಹೋಗಲಿಲ್ಲ, ಮರಳಿ ಹೋದವರು ಮದುವೆಗೆ ಬರಲಿಲ್ಲ, ಸ್ನೇಹವೆಂಬ ಮಂಟಪದಲ್ಲಿ ಪ್ರೀತಿಯೆಂಬ ಹಂದರವನ್ನು ಕರೆತಂದು ಕರುಣೆಯೆಂಬ ತಾಳಿಯನ್ನು ಕಟ್ಟಿ, ತ್ಯಾಗವೆಂಬ ಮಂತ್ರವನ್ನು ಹೇಳಿ ಹೋದರು ಎಂದು ಒಳ್ಳೆಯತನ, ಕಟ್ಟು ವಿಚಾರಗಳ ಮದುವೆ ಒಳಗಿನ ರೀತಿಯನ್ನು ತಿಳಿಸಲಾಗಿದೆ.

ಮನುಷ್ಯ ಹುಟ್ಟುವಾಗ ಏನನ್ನೂ ತರುವುದಿಲ್ಲ, ಸಾಯುವಾಗಲೂ ಜೊತೆಗೆ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ, ಇರುವಷ್ಟು ದಿನಗಳೆಲ್ಲಾ ಮನುಷ್ಯ ಮಂದಿ ಪ್ರೀತಿಯೊಂದನ್ನು ಪಡೆಯಲು ಪ್ರಯತ್ನಿಸುತ್ತಾನೆ. ಆದರೆ ಬರುವಾಗ ಬೆತ್ತಲು, ಹೋಗುವಾಗ ಹೆಸರನ್ನು ಪಡೆಯುವುದು ಹುಟ್ಟು, ಸಾವಿನ ನಡುವೆ ಒಳ್ಳೆಯ ಕರ್ಮಗಳಿಂದ ಹೆಸರನ್ನು ಪಡೆಯಬೇಕು. ಪ್ರತಿಯೊಬ್ಬರಿಗೂ ಅವರ ಕಣ್ಣನ್ನು ತೆರೆದು ನೋಡಲು ಸಾಧ್ಯವಿಲ್ಲ, ಆದರೂ ಜ್ಞಾನಿಗಳು, ಶರಣರು, ಸಂತರು, ತನ್ನ ಅಂತರಂಗದ ಕಣ್ಣನ್ನು ತೆರೆದು ಜಗತ್ತನ್ನು ಕಾಣುವರು. ಅವರು ಬಾಹ್ಯ ಜಗತ್ತಿನ ಸೌಂದರ್ಯವನ್ನು ಕಾಣದೆ ಅಂತರಂಗ ಸೌಂದರ್ಯವನ್ನು

Scanned with CamScanner

ಕಾಣುವರು. ಸಾಮಾನ್ಯವಾಗಿ ಎಲ್ಲರ ಕಣ್ಣಿಗೆ ಕಾಣುವುದು ಬಾಹ್ಯ ಸೌಂದರ್ಯ, ಕೇಳುವುದು ಹೊರಗಿನ ಮಾತುಗಳು, ಮೂಸಿಸುವದು ಕೆಟ್ಟ ವಾಸನೆ, ನಾಲಿಗೆಗೆ ರುಚಿಸುವುದು ಸುಳ್ಳೆಂಬ ಸಿಹಿ, ಸ್ಪರ್ಶಕ್ಕೆ ಸಿಗುವುದು ಅಸ್ಪರ್ಶವಲ್ಲದ ಸ್ಪರ್ಶ.

ಹೀಗೆ ಈ ಪಂಚೇಂದ್ರಿಯಗಳಿಗೆ, ಒಳಗಿನ ಸೌಂದರ್ಯ, ಅಂತರಂಗದ ನುಡಿಗಳು, ನಿಜದ ಪರಿಮಳ, ನಿಜದ ಸವಿ, ಅಸ್ಪರ್ಶದ ಸುಖವಲ್ಲವೆಂದು ಹೇಳುವರು ನಿಜ ಶರಣರು.

ಪ್ರತಿಯೊಬ್ಬರು ಅಂತರಂಗದ ನಿವೇದನೆಯನ್ನು ಮಾಡಿಕೊಳ್ಳಬೇಕು, ಸತ್ಸಂಗದ ಸಹವಾಸ ಮಾಡಬೇಕು ಒಳ್ಳೆಯದನ್ನು ತಿಳಿಯಬೇಕು, ಅರಿಯಬೇಕು ಹೊರತು ಕೆಟ್ಟದನಲ್ಲ. ಅರಿಷಡ್ವರ್ಗಗಳೆಂಬ ಕ್ರೂರ ಪ್ರಾಣಿಗಳನ್ನು ಒಳಗಡೆ ಇಟ್ಟುಕೊಂಡು ಮೇಲೆ ಮನೆಯನ್ನು ಕಟ್ಟಿದರೆ ಏನು ಲಾಭ. ಒಳಗೆ ಆಸೆಗಳನ್ನು ಇಟ್ಟುಕೊಂಡು ಹೊರಗೆ ಹೆಂಡತಿಯನ್ನು ಬಿಟ್ಟುಕೊಟ್ಟರೆ ಹೇಗೆ ? ಮನಸ್ಸಿನೊಳಗೆ ಕ್ರೋದಾಗ್ನಿಯನ್ನಿಟ್ಟುಕೊಂಡು ಜಪು–ತಪವನ್ನು ಮಾಡಿದರೇನು? ಲಾಭ ಮೊದಲು ಹೊರಗಿನ ಪ್ರಪಂಚದ ಕುರಿತು ತಿಳಿದುಕೊಂಡು ಅದರಿಂದಾಗುವ ಒಳ್ಳೆಯ ಕೆಟ್ಟದನ್ನು ತಿಳಿದುಕೊಂಡು ಒಳಗಿನ ವಿಚಾರಗಳನ್ನು ತಿಳಿದುಕೊಳ್ಳಬೇಕು. ಹಾಗೆ ದ್ವೈತದ ಹಂಗನ್ನು ತೊರೆಯದೆ ಅದ್ವೈತದ ಕುರಿತು ನುಡಿಯವರು, ನಾನು ಎಂಬ ಹಂಗನ್ನು ತೊರೆಯದೆ ನೀನೇ ದೇವಯೆನ್ನುವರು, ಮಿಥ್ಯದ ಅರ್ಥವನ್ನು ಅರಿಯದೆ ಕಣ್ಣು ಕಾಣುವುದೇ ಸತ್ಯವೆನ್ನುವರು ನುಡಿಯ ಹಂಗನ್ನು ತೊರೆಯ ದವರು ನಡೆಯನೆಂತು ಕಲಿಸುವರಯ್ಯ ಎಂದು ಹೇಳುವರು. ಆಸೆಯೆಂಬ ಮಗುವಿಗೆ ರೋಷವೆಂಬ ತಾಯಿ, ಕಾಮಿಯೆಂಬ ದುಷ್ಟನಿಗೆ ಕ್ರೂರಿಯೆಂಬ ಸಂದೆ, ಲೋಭಿ ಯೆಂಬ ತಂಗಿಗೆ ಸ್ವಾರ್ಥಿಯೆಂಬ ಅಕ್ಕ, ದರ್ಪವೆಂಬ ತಮ್ಮನಿಗೆ ಅಹಂಕಾರವೆಂಬ ಅಣ್ಣ, ಇಂತಹ ಕೆಟ್ಟ ಕುಟುಂಬದೊಂದಿಗೆ ನಾನು ಹೇಗೆ ಬಾಳಲಿ ಎನ್ನುವರು.

ಸಾಸುವೆಯ ಕಾಳಿನ ಮೇಲೆ ಸಾಗರವು ನಿಂತಿದೆ. ಸೋರಿ ಹೋಗುವ ವಿಚಾರ ಬೇಡ, ಕರುಡನ ಮೇಲೆ ಕರಡಿ ಕುಳಿತಿದೆ, ಕುಣಿದು ಕುಪ್ಪಳಿಸುವುದು ಬೇಡ, ನೆಲದ ಮೇಲೆ ಮುಗಿಲು ಮಲಗಿದೆ, ಮಲಗುವುದು ಹೇಗೆ? ನನ್ನ ಮೇಲೆ ಕುಳಿತು ನೀನು ಜನರೆದುರು ನಿನ್ನಿಂದಲೇ ನಾನೆಂದು ಹೇಳಿಕೊಂಡರೆ ಹೇಗೆ ? ಗಿರಿಯಲ್ಲಿ ಆಡು ಕುಣಿಯುವ ನವಿಲಿಗೆ ಮನುಷ್ಯನು ಮರೆಯಲಿಲ್ಲ ನಿಂತು ಬಾಣವನ್ನು ಬಿಡುವುದನ್ನು ನೋಡಬಹುದು. ಮಾವಿನ ಮರದ ಮೇಲೆ ಕುಳಿತುಕೊಂಡಂತಹ ರೋಗಿಲೆಗೆ ಹದ್ದು ಹೊಂಚು ಹಾಕಿ ಹಿಡಿಯುವುದನ್ನು ನಾ ಕಂಡೆ ಹಾಗೆ ಪಂಚವರ್ಣದ ಗಿಳಿಯನ್ನು ಕಂಡು ಗಿಡುಗ ಬೆನ್ನು ಹತ್ತಿದನ್ನು ಕಂಡನು.

Scanned with CamScan

# 10. ನಾಗೇಂದ್ರ ಎಸ್. ಮಸೂತಿ

**ಪರಿಚಯ :**

ಡಾ. ನಾಗೇಂದ್ರ ಮಸೂತಿಯವರು ಸೋಮಶೇಖರ ಹಾಗೂ ಜಗದೇವಿ ದಂಪತಿಗಳ ಮಗನಾಗಿ 20ನೇ ಜೂನ್ 1964ರಲ್ಲಿ ಜನಿಸಿದರು. ಇವರು ಅಧ್ಯಯನ ಶೀಲರೂ, ಚುರುಕಾದ ಬರವಣಿಗೆಗೆ ಹೆಸರಾದವರೂ ಆದ ಶ್ರೀಯುತರು ಇದೀಗ ಆಧುನಿಕ ವಚನಗಳ ರಚನೆಯಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದಾರೆ. ಡಾ. ನಾಗೇಂದ್ರ ಮಸೂತಿ ಅವರು ಬಹುಮುಖ ಪ್ರತಿಭೆಯ ಕವಿ, ವಿಮರ್ಶಕರು 'ಗುರುಸಿದ್ಧ' ಎಂಬ ಅಂಕಿತದಲ್ಲಿ ನೂರಾರು ವಚನಗಳನ್ನು ರಚಿಸಿದ್ದು ಅನೇಕ ವಿದ್ವಾಂಸರ ಗಮನ ಸೆಳೆದಿವೆ. ಸಮಾಜ, ಸಂಸಾರ, ನೈತಿಕತೆ, ಪ್ರಕೃತಿಯಲ್ಲಿ ದೈವತ್ವ ಕಂಡುಕೊಳ್ಳುವತ್ತ ಅವರ ಬೂದಿ ಗರ್ಭದ ಕೆಂಡ, ಕೆಂಡ ಮಲ್ಲಿಗೆ 150 ವಚನ ಮೂಡಿ ಬಂದಿವೆ.

ಸಾರಾಂಶ : ವಚನಕಾರನು ಇಲ್ಲಿ ನೈತಿಕತೆಯ ಕುರಿತು ಹೇಳಲು ಹೊರಟಿದ್ದಾನೆ. ಸಂಪೂರ್ಣವಾಗಿ ಕೆಟ್ಟ ವಿಷಯಗಳಲ್ಲೆ ಮುಳುಗಿರುವವರಿಗೆ ಯಾವಾಗಲೂ ಕೆಟ್ಟದ್ದನ್ನೆ ಮಾಡುವವರಿಗೆ, ಬಯಸುವವರಿಗೆ, ಒಳ್ಳೆಯದರ ಕುರಿತು ಕಲ್ಪನೆ ಇರುವುದಿಲ್ಲ. ಅವರ ಅನುಭವವನ್ನು ಅದು ಬರುವುದಿಲ್ಲ. ಹಾಗೆ ಕತ್ತೆಗೇನು ಗೊತ್ತು ಕಸ್ತೂರಿಯ ವಾಸನೆ. ಎಂಬುದರಂತೆ ಕೆಟ್ಟವರು ಒಳ್ಳೆಯದನ್ನು ತಿಳಿದುಕೊಳ್ಳುವುದು. ಅಂಧುದವನಿಗೆ ಕತ್ತಲು ಬೆಳಕುಗಳ ಪರಿಕಲ್ಪನೆಯೆ ಇರುವುದಿಲ್ಲ. ಕಿವಿ ಕೇಳಿಸದ ಒಬ್ಬ ವ್ಯಕ್ತಿ ಸೊಬಗಿನ ಶೃತಿಯನ್ನು ಕೇಳಬಹುದೆ. ಮೂರ್ಖನಾದವನು ಒಳ್ಳೆಯವರ ಗುಣವನ್ನು ತಿಳಿಯಲಾರ. ಒಳ್ಳೆಯ ಗುಣ, ಸ್ಥಿತಿಯನ್ನು ಅಸೂಯೆಯ ಭಾವವನ್ನು ತುಂಬಿಕೊಂಡವರಿಗೆ ತಿಳಿಯುವುದಿಲ್ಲ.

ಒಂದು ಕಡೆ ಮನಸ್ಸನ್ನು ಕೇಂದ್ರಿಕರಿಸದೆ ಕಂಡ ಕಂಡ ಕಡೆಯಲೆಲ್ಲ ಚಿತ್ತವನ್ನು ಹರಿಸುವವರನ್ನು ನನಗೆ ತೋರಿಸಬೇಡ. ದೇವರ ಹೆಸರಿನಲ್ಲಿ ನಾಟಕ ಮಾಡುವ, ರುದ್ರಾಕ್ಷಿ ಪಾದುಕೆಗಳನ್ನು ಹಾಕಿ ಮನುಷ್ಯರನ್ನು ನಂಬಿಸಿ ಮೋಸ ಮಾಡುವ, ಜನರನ್ನು ನನ್ನಿಂದ ದೂರಯಿಡು. ನನ್ನ ಕಣ್ಣಿಗೆ ಅವರು ಕಾಣದಂತೆ ಮಾಡು. ನನಗೆ ಈ ಮೋಸಗಾರರಿಂದ ದೂರವಿಟ್ಟು ಸತ್ಯವಂತರ, ನಿತ್ಯವಂತರ ಸತ್ಸಂಗವನ್ನು ಮಾಡಿಸು. ನಿಜ ತತ್ವಗಳನ್ನು ಪಾಲಿಸುವ ನಿಜಗುಣಗಳನ್ನು ತೋರಿಸು ಅಂದರೆ ಒಳ್ಳೆಯವರ ಸಂಘ ಬಯಸುವುದನ್ನು ನಾವಿಲ್ಲಿ ಕಾಣಬಹುದು. ಒಂದು ಒಳ್ಳೆಯ ಕಾರ್ಯಕ್ಕೆ ಹೋಗುವಾಗ ಅಪಶಕುನ, ಅಪನಂಬಿಕೆಗಳು ಸಮಾಜದಲ್ಲಿ ರೂಢಿಯಾಗಿವೆ. ನಮ್ಮ ಭವಿಷ್ಯದ ಸೂಚನೆಗಳು ಅವು ಎಂಬಂತೆ ವರ್ತಿಸುತ್ತಾರೆ. ಅದಕ್ಕೂ ನಾವು ಮಾಡುವ ಕಾರ್ಯಕ್ಕೂ ಯಾವುದೇ ರೀತಿಯಾದ ಸಂಬಂಧ ವಿರುವುದಿಲ್ಲ. ನಾವು ಮಾಡುವ ಕಾರ್ಯಗಳು ಒಳ್ಳೆಯದಾಗಿದ್ದರೆ ಒಳ್ಳೆಯ

Scanned with CamScan

ಪ್ರತಿಫಲ ದೊರಕುತ್ತದೆ. ಹಾರಿ ಬರುವ ಕಾಗೆ ಕೂತು ಕೂಗುವ ಗೂಗೆ ಅಡ್ಡ ಬರುವ ಬೆಕ್ಕು, ಇವುಗಳಿಗೆ ನಮ್ಮ ಭವಿಷ್ಯ ಹೊಂದಿಕೊಂಡಿಲ್ಲ ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಮನುಷ್ಯನು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ಸ್ವಚ್ಛತೆ ಯೆಂಬುದಿಲ್ಲ. ಎಲ್ಲಾ ನಾಟಕ, ಮೇಲೆ ಒಂದು ರೀತಿ, ಒಳ್ಳೆ ಮನಸ್ಸು ಇನ್ನೊಂದು ರೀತಿ. ಈ ರೀತಿ ಮೇಲೊಂದು ಬಣ್ಣ ಒಳಗೊಂಡು ಬಣ್ಣ ಹಚ್ಚಿ ಬದುಕು ನಡೆಸುವುದು ಉತ್ತಮವಲ್ಲ. ಅದು ಶಾಶ್ವತವು ಅಲ್ಲ. ಹೀಗೆ ಮಾಡಿದರೆ ಅವನಿಗೆ ಕೊನೆಗೆ ಏನನ್ನು ಉಳಿಯುವುದಿಲ್ಲ.

ನಾಚಿಕೆ ಪಡುವ ಹೆಣ್ಣು ಮಗಳು ಲೇಸು, ದುಡಿವ ಗಂಡಸು, ಬೆಳೆವ ಮಗ, ಎದುರಾಡದ ಸೊಸೆ, ಇರಿಯುವ ವಿಚಾರ, ಅರೆಯುವ ಆಚಾರ, ನಡೆವ ಮಾರ್ಗಕ್ಕೆ ಶ್ರೀಗುರು ಸಿದ್ಧನೇ ಒಳಿತೆಂದು ಹೇಳಲಾಗಿದೆ. ಒಬ್ಬರನ್ನೊಬ್ಬರು ವಂಚಿಸಿಕೊಳ್ಳುವವರನ್ನು ಏನೆಂದು ಕರೆಯಲು ಸಾಧ್ಯ. ಎಲ್ಲಾ ಕಡೆಯಲ್ಲೂ ಭ್ರಷ್ಟಾಚಾರವೆ ಮನೆ ಮಾಡಿರುವಾಗ ಎಲ್ಲೂ ಒಳ್ಳೆಯದನ್ನು ಕಾಣಲು ಆಗದು. ಹತ್ತು ಹಲವಾರು ವಿಷಯಗಳನ್ನು ತೆಗೆದುಕೊಂಡು ಸಮಾಜದಲ್ಲಿ ವಿಷದ ಬೀಜವನ್ನು ಬಿತ್ತಿರುವರು. ಎಲ್ಲಿ ನೋಡಿದರಲ್ಲಿ ಬರೀ ದ್ವೇಷ, ದೋಷ, ಪ್ರೀತಿ, ವಾತ್ಸಲ್ಯ, ನನ್ನದು ನಮ್ಮವರು ಎಂಬ ಭಾವನೆಯೆ ಹೊರಟು ಹೋದಂತಾಗಿದೆ. ಕುಟುಂಬದಲ್ಲಿ ಹೊರಗಡೆ ಸ್ನೇಹ ಮಿತ್ರರಲ್ಲಿ, ಬಂಧು-ಬಾಂಧವರಲ್ಲಿ ನಂಬಿಕೆ ಇಲ್ಲ. ವಾತ್ಸಲ್ಯವಿಲ್ಲ. ಆಸೆಯಿಲ್ಲ. ಒಳ್ಳೆಯ ಆಚಾರ-ವಿಚಾರಗಳು ಇಂದು ಕಾಣುತ್ತಿಲ್ಲ. ಎಲ್ಲರಲ್ಲೂ ಕೇವಲ ಸ್ವಾರ್ಥವೇ ತುಂಬಿಕೊಂಡಿದೆ.

ಇಂತಹ ಒಳ್ಳೆಯತನ, ಮನುಷ್ಯತ್ವದ ಗುಣ ಹೊಂದಿರದಿದ್ದರೆ ಮನುಷ್ಯನ ಜನ್ಮ ನಾಯಿಗಿಂತ ಕಡೆ. ಮನೆಯೊಳಗೆ ಎಷ್ಟು ಸಂಪತ್ತಿದ್ದರೇನು ಮನಸ್ಸಿನೊಳಗೆ ಬಡತನವು ತುಂಬಿಕೊಂಡಿದೆ. ಕಲಿತ ವಿದ್ಯೆ, ಬದುಕಿನಲ್ಲಿ ವಿನಯವನ್ನು ತಂದು ಕೊಡುತ್ತಿಲ್ಲ. ಆಚಾರ, ವಿಚಾರ, ವಿಮರ್ಶೆಗಳು ತರ್ಕಕ್ಕೆ ನಿಲಿಯು ಯಾವ ಫಲವಿಲ್ಲ. ತತ್ವ-ಸಿದ್ಧಾಂತಗಳನ್ನು ಪಾಲಿಸದೆ ಹೋಗುವ ಅರಿವು, ಜ್ಞಾನ, ಆಚಾರ-ವಿಚಾರಗಳಿದ್ದು ಯಾವುದಕ್ಕೂ ಉಪಯೋಗವಿಲ್ಲ. ಎಂದು ವಚನಕಾರನು ಸಮಾಜದ ರೀತಿ-ನೀತಿಗಳ ಸ್ಥಿತಿಯನ್ನು ಬಿಡಿಸಿ ಹೇಳಲು ಪ್ರಯತ್ನಿಸಿದ್ದಾರೆ.

## ಎರಡು ಅಂಕದ ಪ್ರಶ್ನೆ

ಪ್ರಶ್ನೆ : ಯಾವುದು ...

Scanned with CamScan

# 13. ಸರಸ್ವತಿ ಚಿಮ್ಮಲಗಿ

ಪರಿಚಯ : ಡಾ. ಸರಸ್ವತಿ ಚಿಮ್ಮಲಗಿಯವರು ಕಲಬುರಗಿಯ ಹೆಚ್. ಕೆ. ಇ. ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವಿವಿಧ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಗುಲಬರ್ಗಾದ ಕನ್ನಡ ವೀರಮ್ಮ ಗಂಗಸಿರಿ ಮಹಿಳಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕಾವ್ಯ, ನಾಟಕ, ರಂಗಭೂಮಿ ಅವರ ಪ್ರಮುಖ ಕ್ಷೇತ್ರ. 'ಎಡಬಿಡಂಗಿ' ಎಂಬ ಅಂಕಿತದಲ್ಲಿ 'ಎಡಬಿಡಂಗಿ ದೇವನ ವಚನಗಳು' ಸಂಕಲನವನ್ನು ಪ್ರಕಟಿಸಿದ್ದಾರೆ. ಈ ವಚನಗಳು ಪದ್ಯವೂ ಹೌದು, ವಚನ ರೂಪದ ಗದ್ಯಗಳೂ ಹೌದು. ಇವುಗಳಲ್ಲಿ ಹರಿತವಾದ ಭಾಷೆ ಸ್ತ್ರೀ ಶೋಷಣೆ, ನಯವಂಚಕತನಗಳನ್ನು ಎತ್ತಿ ತೋರಿಸಿ ನಿರ್ಬಿಡೆಯ ವ್ಯಕ್ತಿತ್ವಕ್ಕೆ ಹೆಸರಾಗಿದ್ದಾರೆ.

ಡಾ. ಚಿಮ್ಮಲಗಿಯವರು ಕ್ರಿಯಾತ್ಮಕತೆಯಿಂದ ಕೂಡಿದ ಪ್ರತಿಭೆಯ ವ್ಯಕ್ತಿತ್ವ, ಇವರು ಸಾಹಿತ್ಯದಲ್ಲಷ್ಟೇ ಅಲ್ಲದೆ ರಂಗಭೂಮಿ, ಆಕಾಶವಾಣಿ, ದೂರದರ್ಶನ ದಲ್ಲಿಯೂ ಖ್ಯಾತಿ ಪಡೆದು ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಜಯವನ್ನು ಸಾಧಿಸಿ, 1995 ರಲ್ಲಿ ಮಲೇಶಿಯಾದ ಪೆನಾಂಗದಲ್ಲಿ ಮಲೇಶಿಯನ್ ಓಪನ್ ವೆಟರನ್ ಅಥ್ಲೆಟಿಕ್ ಚಾಂಪಿಯನ್‌ಶಿಪ್ ಪ್ರಶಸ್ತಿಗೆ ಭಾಜನರಾಗಿದಾರೆ.

ಸಾರಾಂಶ : ಅಸತ್ಯವಂತರ, ಅಧರ್ಮಿಯವರ ಧೈರ್ಯ ಮೆಚ್ಚಲೆ ಬೇಕು. ಅದು ಅವರ ಕಣ್ಣಿಗೆ ಕಾಣದೆ ಅನುಭವಕ್ಕೂ ಬಾರದಷ್ಟು ಆಳವಾಗಿ ಬೇರೂರಿ ಬಿಟ್ಟಿರುತ್ತದೆ. ನೊರೆವಾಲೋಳಗೆ ತುಪ್ಪದ ಬೆರೆಸಿದಂತೆ, ಅಡಗಿರುತ್ತದೆ. ಅದಕ್ಕೆ ಪ್ರತಿ ಹೆಜ್ಜೆಯಲ್ಲೂ ಸಿಗುವ ಪ್ರೇರಣೆಯಿಂದ ಇನ್ನೂ ಅದು ಘಟ್ಟಿಗೊಳ್ಳುತ್ತದೆ. ಆದರ್ಶವನ್ನು ನಾಶಗೊಳಿಸಿ, ಕಾನೂನನ್ನು ಕಾಯುವವರೆ ಅದರ ಭಕ್ಷಕರಾಗಿ ಸತ್ಯವನ್ನು ಸದೆ ಬಡೆದು ಸಾಯಿಸಿ, ಗಂಗೆಯಲ್ಲಿ ಹೊಮ ಬಿಟ್ಟಂತೆ ಮಾಡಿ ಸುಳ್ಳಿಗೆ ಸತ್ಯದ ಮುಖವಾಡ ಹಾಕಿ,ಸ ಕೊಲೆ ಸುಲಿಗೆ ಮಾಡುವಂತಹ ನರಭಕ್ಷಕರಿಗೆ ರಕ್ಷಣೆ ನೀಡಿ, ನ್ಯಾಯವಾದಿಗಳಲ್ಲಿ ವ್ಯಾಧಿಗಳಾಗಿರುವುದನ್ನು ನೋಡಿ ನ್ಯಾಯ ದೇವತೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಅಂಧಳಾಗಿದ್ದಾಳೆ. ಪ್ರಾರಂಭದಲ್ಲಿ ಅದನ್ನು ತಿದ್ದದೆ, ಸುಧಾರಿಸಿದೆ ಹೋಗಿ ಅದು ಮುಂದೆ ದೊಡ್ಡ ಪ್ರಮಾನದಲ್ಲಿ ಬೆಳೆದಾಗ ಅದಕ್ಕೆ ಇನ್ನೊಂದು ಕಾರಣ ನೀಡಿ, ಇನ್ನೊಂದು ಮುಖವಾಡ ಹಾಕಿ ಅದನ್ನು ಅಲ್ಲೆ ಅಂತ್ಯಗೊಳಿಸುವ ಪ್ರಯತ್ನ ಮಾಡುವರು. ಮಾಡಿಡುದು ಕೆಟ್ಟ ಕಾರ್ಯ ವಾದರೂ ಅದನ್ನು ತೋರಿಸಿಕೊಳ್ಳದೆ ಬಲು ಹಮ್ಮಿನಿಂದ ಬೀಗುವರು.

Scanned with CamScan

ಪರಿಸ್ಥಿತಿಯ ಕೈಗೊಂಬೆಯಾಗಿ ಕಷ್ಟದಿಂದ ಬಳಲಿ ಬೆಂಡಾಗಿ ಕೆಟ್ಟ ದಾರಿಯನ್ನು ಹಿಡಿದಾಗ, ಅದರಲ್ಲಿ ಜಾರಿ ಬಿದ್ದು ದಾರಿ ಕಾಣದೆ ಹೋದಾಗ ಅದಕ್ಕೆ ವೇಶ್ಯೆಯೆಂಬ ಹಣೆಪಟ್ಟಿ ಕಟ್ಟಿ ಬಿಡುವರು. ಅನಿವಾರ್ಯವಾಗಿ ಸಮಯದ ಕೈಗೊಂಬೆಯಾಗಿ ಬದುಕುವವರನ್ನು ಕರೆತಂದು ತಮ್ಮ ಸ್ವಾರ್ಥಕ್ಕಾಗಿ ಬಳಸಿ ಕೊಳ್ಳುವ ನೀಚರೂ ಅದಕ್ಕೊಂದು ಹೊಸ ಹೆಸರನ್ನು ನೀಡುವರು. ಇಂತಹ ಶೋಷಣೆಯ ವಿರುದ್ಧ ಕೆಂಡ ಕಾರುವಂತಾಗಬೇಕು. ಇಲ್ಲಿ ಪ್ರತಿಯೊಬ್ಬರೂ ತಮ್ಮ ಸ್ವಾರ್ಥಕ್ಕಾಗಿ, ತಮ್ಮ ಲಾಭಕ್ಕಾಗಿ ವಿಚಾರಿಸುವರು. ಮಾಡುವ ಕೆಲಸದಿಂದ ಲಾಭ ಬಂದರೆ ಸಾಕು ಎನ್ನುವರು. ಅದಕ್ಕೆ ವಚನಗಾರ್ತಿಯು ಜಾಕೇಜು ಹುಡುಗರಿಗೆ ಹುಡುಗಿಯರು, ಹುಡುಗಿಯರಿಗೆ ಸೌಂದರ್ಯತೆಗಳು, ರಾಜಕಾರಣಿ ಗಳಿಗೆ ಕಾಲ್‌ಗರ್ಲ್‌ಗಳು, ತಾರೆಯರಿಗೆ ಮೈ ತೋರುವುದು, ಚಿತ್ರೋದ್ಯಮಿ ಗಳಿಗೆ ಹಣ, ವ್ಯಾಪಾರಿಗೆ ಲಾಭ, ಗಂಡಿಗೆ ವರದಕ್ಷಿಣೆ ಹೆಣ್ಣಿಗೆ ಮದುವೆ, ಪತ್ರಿಕೆಗಳಿಗೆ ವರದಿ, ಸಂಪಾದಕರಿಗೆ ಲಾಭ.

ಹೀಗೆ ಸಾಕು-ಬೇಕುಗಳ ನಡುವೆ ಎಲ್ಲರ ಜೀವನವು ನಿಂತಿದೆ. ಇಂತಹ ಬದುಕನ್ನು ಕಂಡು ಬೇಸತ್ತು ಹೋಗಿದೆ ಎನ್ನುವರು. ಗಂಡಿನ ಈ ಕೆಟ್ಟ ಕಾರ್ಯಗಳ ಕುರಿತು ಈ ವಚನ ತಿಳಿಯುತ್ತದೆ. ಪುರುಷ ಪ್ರಧಾನ ಈ ಸಮಾಜದಲ್ಲಿ ಗಂಡು ಎಂಬ ಅಹಂ ಭಾವ ಅವನನ್ನು ಎಲ್ಲಿಯವರೆಗೆ ಕರೆದುಕೊಂಡು ಹೋಗಿದೆ ಎಂಬ ಪರಿವು ಕೂಡಾ ಅವನಿಗಿಲ್ಲ. ಇಂತಹ ಮೋಸ, ವಂಚನೆಯಿಂದ ನಡೆಯುವವರ, ಶಿಕ್ಷಣಕ್ಕೊಂದು ಬಣ್ಣವನ್ನು ಬದಲಾಯಿಸುವ ಗಂಡುಗಳಿಗೆ ಧಿಕಾರ ಎನ್ನುವದು ಇಲ್ಲಿ ಕಾಣಬಹುದು. ಇದಕ್ಕೆ ದೇವಾನುದೇವತೆಗಳು ಸಹ ಸಾಕ್ಷಿಯಾಗಿದ್ದಾರೆ. ಆ ಶಿವನು ಇದಕ್ಕೆ ಹೊರತಾಗಿಲ್ಲ. ಗೌರಿಯು ಪಕ್ಕದಲ್ಲಿದ್ದರೂ ಗಂಗೆಯನ್ನು ಜಡೆಯಲ್ಲಿರಿಸಿ ಕೊಂಡನು. ಮುದಿ ಬಯಸ್ಸಾದರು ಮಗಳಂತಿರುವ ಇಪ್ಪತ್ತರ ಹರೆಯ ಹುಡುಗಿ ಯರನ್ನು ಆಸೆ ಪಡುವರು. ಕಾರಿನ ಕೀಲಿಯೊಂದಿಗೆ ಹೆಂಡತಿಯನ್ನೇ ಬದಲಿಸುವ ಗಂಡಂದಿರು, ಎಷ್ಟೇ ವಿದ್ಯಾವಂತರಾದರೂ ಎಷ್ಟೇ ಸಾಧನೆ ಮಾಡಿದರೂ ಇವರ ದರ್ಪ ಅಹಂಕಾರ ಮೋಸ ಮಾಡುವ ವಂಚಿಸುವ ಬುದ್ಧಿಹೋಗಲಿಲ್ಲ. ಇಂತಹವರ ಸೊಕ್ಕನ್ನು ಅಡಗಿಸು ಎಂದು ಕೇಳುವರು.

ಬಾಗೇವಾಡಿಯಲ್ಲಿ ಜನಿಸಿ ಭಗವಂತನ ಇಚ್ಛೆಯಂತೆ ಸಮಾಜದಲ್ಲಿನ ಅಜ್ಞಾನ-ಅಂಧಕಾರವನ್ನು ಹೊಡೆದೋಡಿಸಿ ಮಾನವೀಯತೆಯನ್ನು ಮೂಡಿಸದಂತಿದೆ. ಬಸವಣ್ಣನೆಂಬ ಮಹಾಪುರುಷ ಬಿಜ್ಜಳನಲ್ಲಿಗೆ ಬಂದು ನೆಲೆ ನಿಂತ. ಅಂದು ಹರಡಿಕೊಂಡಿದ್ದ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆ ಯನ್ನು ತರಲು ಅಹೋ ರಾತ್ರಿ ದುಡಿದು ದೇಹವನ್ನು ಸವಿಸಿದ, ಜನರ ಮನಸ್ಸಿನಲ್ಲಿ ಒಳ್ಳೆ ವಿಚಾರ

Scanned with CamScan

# 16. ಎ. ಜೆ. ರತ್ನ ಕಾಳೇಗೌಡ

ಕವಿ ಪರಿಚಯ : ಕನ್ನಡದ ಸುಪ್ರಸಿದ್ಧ ಮಹಿಳಾ ಸಾಹಿತಿಗಳಲ್ಲಿ ಎ. ಜಿ. ರತ್ನಕಾಳೇಗೌಡ ಒಬ್ಬರು. ಇವರು ಮೂಲತಃ ಹಾಸನ ಜಿಲ್ಲೆಯವರು, ಬೆಂಗಳೂರಲ್ಲಿ ವಾಸವಾಗಿದ್ದಾರೆ. 60 ವರ್ಷಗಳಲ್ಲಿ ಸುಮಾರು 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು ಮೂಲತಃ ಕವಯತ್ರಿ ಕತೆಗಾರ್ತಿ–ಕಾದಂಬರಿಗಾರ್ತಿ ಸಾಹಿತಿಯಾದಂತೆ ಒಬ್ಬ ಸೃಜನಶೀಲ ಬರಹಗಾರ್ತಿಯಾಗಿ ಖ್ಯಾತರಾಗಿದ್ದಾರೆ.

ಸಾರಾಂಶ : ನಾವು ಏನನ್ನಾದರೂ ಬಯಸಿದರೆ ಅದನ್ನು ಪಡೆಯಲು ಕಷ್ಟ ಪಡುವುದು ಸಾಮಾನ್ಯ. ಕಷ್ಟಪಡದೆ ಯಾವುದನ್ನು ಪಡೆಯಲು ಆಗುವುದಿಲ್ಲ. ಅದರಂತೆ ಈ ಪ್ರಪಂಚದಲ್ಲಿ ಯಾವುದು ಶಾಶ್ವತವಲ್ಲ. ನಾವು ಪಡೆದದ್ದು ಕೊನೆಯವರೆಗೂ ಉಳಿಯುವುದಿಲ್ಲ. ನಮ್ಮ ಜೊತೆಗೆ ಯಾವುದೂ ಬರುವುದಿಲ್ಲ. ಬರುವುದು ವಿದ್ಯೆ, ಬುದ್ಧಿಯೆಂಬ ಸಂಪತ್ತು. ಇದನ್ನು ಪಡೆಯಲು ಶ್ರಮಪಡಬೇಕು. ಅದಕ್ಕೆ ಲೆಕ್ಕವಿಲ್ಲದಷ್ಟು ಜನ ಅಕ್ಕರೆಯಿಂದ ಆದರಿಸುವರು. ನಡತೆಗೆಟ್ಟು ಬಾಳಿದರೆ ನಿರ್ಗುಣನೆಂದು ಉಗುಳುವರು, ಸಂಸ್ಕಾರಿಯಾಗಿ ಬಾಳಿದರೆ ಸಜ್ಜನನೆಂಬ ಬಿರುದು ಬರುವುದು. ವಿದ್ಯೆಯಿಂದಲೇ ಉದ್ಯೋಗ, ಸಂಪತ್ತು ದೊರೆಯುವುದು ಅಜ್ಞಾನದಿಂದ ಅಹಂಕಾರದಲ್ಲಿ ಮುಳುಗಿ ಪ್ರೀತಿ, ವಾತ್ಸಲ್ಯವೆಂಬುದನ್ನು ಮರೆತಿದ್ದಾರೆ. ಹೊಲಸು ಪ್ರಪಂಚವನ್ನು ಸೃಷ್ಟಿಸಿಕೊಂಡು ಹೊಲಸು ವಾತಾವರಣ ದಲ್ಲಿ ಮುಳುಗಿ ಏಳುತ್ತಿದ್ದಾರೆ. ವಿದ್ಯೆ ಕಲಿಯದೆ ಪೋಲಿ ಪುಂಡರಾಗಿ ಅಲೆಯುತಿಹರು. ವಿದ್ಯೆಯೆಂಬುದೇ ಈ ಜೀವನಕ್ಕೆ ಬೆಳಕು, ಇದು ಅಜ್ಞಾನವನ್ನು ನೀಗಿ ಜ್ಞಾನ ದೇಗುಲಕ್ಕೆ ಕರೆದುಕೊಂಡು ಹೋಗುತ್ತದೆ. ಇದರಿಂದ ಘನತೆ, ಗೌರವ ದೊರಕುತ್ತದೆ.

ಈ ವೈಜ್ಞಾನಿಕ ಯುಗದಲ್ಲಿ ಎಲ್ಲವೂ ಕೌತುಕ ರೋಬೋಟ್‌ನ ಪ್ರವೇಶ ಗುಂಡಿ ಒತ್ತಿದರೆ ಸಾಕು ಕುಳಿತ ಕಡೆಗೆ ಸೇವೆ ಸಲ್ಲುವುದು. ಮನೆ, ಕಚೇರಿ, ಅಷ್ಟೇ ಅಲ್ಲದೆ ಬಾಹ್ಯಾಕಾಶದ ಯಾನದಲ್ಲೂ ಸಹ ಇದರ ಸೇವೆ. ಶ್ರೀಮಂತಿಕೆಯಲ್ಲಿ ತೇಲಾಡುವ ಹೃದಯಹೀನರು, ಇವರು ಎಲ್ಲವನ್ನೂ ಹಣ ಅಂತಸ್ತಿನಲ್ಲಿ ಅಳಿದು ನೋಡುವರು. ಬುದ್ಧಿಹೀನರ್ಯಾದವರು ಬಡವರ ತೊಳಲಾಟವನ್ನು ತಿಳಿಯಲಾರರು. ವಿದ್ಯೆಯನ್ನು ಕಲಿಯದೆ ಇರುವ ಪುಂಡರು ನಡತೆಯ ಕುರಿತು ತಿಳಿಯಲಾರರು. ಅವರು ನಡದದ್ದೆ ದಾರಿ ಅವರಿಗೆ ನುಡಿದದ್ದೆ ವೇದ. ವಿದ್ಯೆ ಇರುವಲ್ಲಿ ವಿನಯವು ಇರಲು ವ್ಯಕ್ತಿತ್ವಕ್ಕೆ ವಿದ್ಯೆಯೇ ಭೂಷಣ. ನಾವು ಕಂಡ ಕನಸು ನನಸಾಗುತ್ತಿಲ್ಲ, ನನಸಾಗುವುದಿಲ್ಲ ಎಂದು ಬೇಸರಪಟ್ಟುಕೊಳ್ಳುವುದು, ವ್ಯಥೆಪಡುವುದು ಸಾಮಾನ್ಯ, ಆದರೆ ಅದಕ್ಕೆ ಕೇವಲ ಕನಸು ಕಾಣದೆ. ಆ ಕನಸನ್ನು ನನಸಾಗಿಸಿಕೊಳ್ಳಲು ಶ್ರಮ ಪಡಬೇಕು ಎನ್ನುವುದನ್ನು ತಿಳಿದುಕೊಂಡಿರಬೇಕು. ಕೈ ಕೆಸರಾದರೆ, ಬಾಯಿ ಮೊಸರಾಗುವುದು. ಕನಸನ್ನು ಕಟ್ಟಿಕೊಳ್ಳಲು ಹಣವೊಂದೆ ತೆರಬೇಕಾಗಿಲ್ಲ, ಹಣವು ಗುಣದ ಮುಂದೆ ಗೌಣ, ವಿದ್ಯೆಯೇ ಹಣ ಅಂತಸ್ತಿಗೆ ಮೂಲ. ಕಂಡ ಕನಸೆಲ್ಲವೂ ನನಸಾಗುವುದಿಲ್ಲ, ಈಡೇರದ ಕನಸು ಕಾಣಲು

Scanned with CamScan

ಚೆಂದ. ದಿನವಿಡಿ ಕನಸು ಕಾಣುವುದು ಚೆಂದ ಎಂದು ಕೂತರೆ ಅಂದಗೆಟ್ಟ ಬಾಳು ನಿನ್ನದಾಗುವುದು.

ಇಂದಿನ ಯುಗದಲ್ಲಿ ಪ್ರತಿಯೊಬ್ಬರು ಅವರವರ ಸ್ವಾರ್ಥಕ್ಕೆ ಹೆಚ್ಚು ಬೆಲೆ ಕೊಡುವವರಾಗಿದ್ದಾರೆ. ತಮ್ಮ ಕೆಲಸವನ್ನು ಸಾಧಿಸಿಕೊಳ್ಳಲು ಯಾವ ಕೆಲಸಕ್ಕೆ ಬೇಕಾದರೆ ಕೈ ಹಾಕುವರು. ಎದುರು ನಯವಾಗಿ ಮಾತನಾಡಿ ನಯವಂಚನೆ ಮಾಡುವರು, ತುಪ್ಪದಂತೆ ಮಾತನಾಡಿ ತಿಪ್ಪೆ ಮಾಡುವರು. ಕೇಳಿದರೆ ಕೊಡಲಾರರು, ನೀಡಿದರೆ ಬೇಡವೆನ್ನದೆ ಕೈಯನ್ನು ಚಾಚುವರು. ಕುಟುಂಬದ ಸದಸ್ಯರಲ್ಲಿ ಒಡಕನ್ನು ತಂದು, ಸಂಸಾರದಲ್ಲಿ ಬಿರುಕನ್ನು ಮೂಡಿಸಿ ಸಂತೋಷ ಪಡುವರು. ಸೋದರರ ಮನಸ್ಸಿಗೆ ಮತ್ಸರವನ್ನು ತುಂಬುವರು. ಮನ–ಮನೆ ಒಡೆದು ಮಹಾನಂದ ಪಡುವರು. ತುಂಬಿದ ಮನೆಯಲ್ಲಿ ಉಣ್ಣುವುದಕ್ಕೆ ಬರವಿಲ್ಲ. ಉಂಡ ಮನೆಗೆ ಮಣ್ಣು ಹಿಡಿಯಬೇಡ, ಗುರುಗಳು ತೋರುವ ಮಾರ್ಗ ಸನ್ಮಾರ್ಗಕ್ಕೆ ಸಂಪರ್ಕವನ್ನು ತೋರುವುದು. ಅವರ ನುಡಿ ಸತ್ಯ ದರ್ಶನಕ್ಕೆ ಸೇತುವೆಯಾಗುವುದು. ಅವರ ಉಚನಕ್ಕೆ ಕಿವಿದೆರೆದು ಜ್ಞಾನ ರಸವಿದು. ಮನ ಮನಗಳು ಶುದ್ಧವಾಗಿ ಮನುಷ್ಯನಾಗಿ ಮರ್ತ್ಯ ಲೋಕದೊಳಗೆ ಮುತ್ತಾಗಿ ಜಗತ್ತು ಮೆಚ್ಚುವಂತೆ ಬಾಳು. ಮನಸ್ಸಿನ ಚಿತ್ತವನ್ನು ಕೆಣಕುವ ಪ್ರವಚನ, ಕುತ್ತು ತರುವ ಹರಟೆ, ಮುಳ್ಳಾಗುವುದು ಬಾಳಿಗೆ, ಪಾಠ ಅಧ್ಯಯನದಲ್ಲಿ ತೊಡಗು, ಪರಿಸರವನ್ನು ಕಾಪಾಡು ಗಿಡ ಮರಗಳೇ ಕಲಿಸುವುದು ಪಾಠ. ಕಲಿಯುವುದಿದೆ ಅನವರತ ಕಲಿಯಲು ಹಿರಿಯ ಕಿರಿಯನೆಂದು ನೋಡದಿರು ಎಂದು ವಚನಕಾರರು ಹೇಳುತ್ತಾರೆ.